ಅಚಲ

ತಿಂಗಳ ಪತ್ರಿಕೆ

ಬಿಡಿಪ್ರತಿ : 4 ರೂ.

ಅಕ್ಟೋಬರ್ - 2005

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಅಚಲ

ಸಂಪುಟ - 20 ಸಂಚಿಕೆ : 10

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.
ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ನಾಚಿಕೆಗೇಡು

ಭುವನೇಶ್ವರದ ಪುರಿ ಜಿಲ್ಲೆಯ ಭುವನಪಟ್ಟಿ ಗ್ರಾಮದಲ್ಲಿ ಕ್ಷೌರಿಕ ಸಮುದಾಯಕ್ಕೆ ಸೇರಿದ ಒಂದು ಗುಂಪಿನ ದಲಿತ ಮಹಿಳೆಯರನ್ನು ಮನೆಯಿಂದ ಹೊರಗೆಳೆದು ತಂದು ಬೀದಿಯಲ್ಲಿ ಬೆತ್ತಲೆ ಮೆರವಣಿಗೆ ಮಾಡಿದರಂತೆ. ಅವರು ಮಾಡಿದ ತಪ್ಪು : ಅವರ ಗಂಡಂದಿರು ಆ ಊರ ಗಣ್ಯರ ಮನೆಯ ಮದುವೆಯಲ್ಲಿ ವರನ ಮತ್ತು ಅವನ ಸಂಬಂಧಿಗಳ ಪಾದ ತೊಳೆಯಲಿಲ್ಲವಂತೆ ! ಅದಕ್ಕಾಗಿ ಆ ಊರಿನ ಗಣ್ಯರು ತಾವೇ ತೆಗೆದುಕೊಂಡಿರುವ ಶಿಕ್ಷೆಯ ಕ್ರಮ. ಆ ಊರಿನಲ್ಲಿ ಕಳೆದ ವರ್ಷದಿಂದಲೂ ಒಂದು ರೀತಿಯ ಸಂಘರ್ಷ ನಡೆಯುತ್ತಲೇ ಬಂದಿದೆ. ಕ್ಷೌರಿಕ ಸಮುದಾಯದ ಐದು ಕುಟುಂಬಗಳು ಈ ಅವಮಾನವೀಯ ಪದ್ಧತಿಯನ್ನು ಆಚರಿಸಲು ತಿಸ್ಕರಿಸಿದ್ದಕ್ಕೆ ಬಹಿಷ್ಕಾರಕ್ಕೆ ಒಳಗಾಗಿದ್ದಾರೆ. ನಮ್ಮದು ಇದೆಂತಹ ಪ್ರಜಾಪ್ರಭುತ್ವ ?

ಈ ಘಟನೆಯನ್ನು ಅಚಲ ತೀವ್ರವಾಗಿ ಖಂಡಿಸುತ್ತದೆ ಮತ್ತು ಸಂಬಂಧಪಟ್ಟವರು ಈ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ಈ ಸಂದರ್ಭದಲ್ಲಿ ಔಚಿತ್ಯವೆನಿಸುವ ಹೆಚ್. ನಾಗವೇಣಿಯವರ 'ದಾನ' ಕಥೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಸಂಪಾದಕೀಯ

ಒಂದು ಹೆಜ್ಜೆ ಮುಂದೆ ... ಎರಡು ಹೆಜ್ಜೆ ಹಿಂದೆ?

ದೆಹಲಿ ಹೈಕೋರ್ಟು ಇತ್ತೀಚೆಗೆ ಹದಿನೈದು ವರ್ಷ ವಯಸ್ಸಿನ ಅಪ್ರಾಪ್ತ ಬಾಲಕಿಯ ವಿವಾಹವನ್ನು ಸಮರ್ಥಿಸಿ ತೀರ್ಪು ನೀಡಿರುವುದು ನಾಗರೀಕ ಮನಸ್ಸುಗಳಿಗೆ ದೊಡ್ಡ ಆಘಾತವುಂಟು ಮಾಡಿದೆ. ಪ್ರೀತಿಯ ಪಾರಮ್ಯತೆಯನ್ನು ಎತ್ತಿ ಹಿಡಿದಿರುವುವೆಂದು ಭ್ರಮಿಸಿರುವ ನ್ಯಾಯಾಂಗ ಭಾರತದ ಮಹಿಳಾ ಸಂಕುಲಕ್ಕೆ ಎಸಗಿದ ಘೋರ ಅಪಚಾರ ಇದಾಗಿದೆ. ಆಧುನಿಕ ಭಾರತದ ಚರಿತ್ರೆಯಲ್ಲಿ ನಮ್ಮ ಆರಂಭದ ಸಮಾಜ ಸುಧಾರಕರು ಬಾಲ್ಯ ವಿವಾಹ, ಹೆಣ್ಣಿನ ವಿವಾಹ ವಯಸ್ಸು - ಇವುಗಳನ್ನು ಕುರಿತು ನಡೆಸಿದ ಹೋರಾಟ, ಗಳಿಸಿದ ವಿಜಯ ಇವುಗಳಿಗೆ ಮಸಿ ಬಳಿಯುವಂತಹ ಪರಿಣಾಮ ಈ ತೀರ್ಪು ಮಾಡಲಿದೆ.

ಮಹಿಳೆಯರ ವಿವಾಹ ವಯಸ್ಸು ಹದಿನೆಂಟು ಮತ್ತು ಪುರುಷರ ವಯಸ್ಸು ಇಪ್ಪತ್ತೊಂದು ಇರಬೇಕೆಂಬ ಶಾಸನವಿದ್ದಾಗಲೂ ನಮ್ಮಲ್ಲಿ ಬಾಲ್ಯ ವಿವಾಹದ ಪಿಡುಗೇನೂ ಕಡಿಮೆಯಾಗಿಲ್ಲ. ಸಾಮೂಹಿಕ ವಿವಾಹದ ಹೆಸರಿನಲ್ಲಿ ಮಂತ್ರಿ ಮಹೋದಯರ, ಮಠಾಧಿಪತಿಗಳ ಸಮಕ್ಷಮದಲ್ಲಿ ಆಗಾಗ ನಡೆಯುವ ಹಸುಳೆಗಳ ವಿವಾಹಕ್ಕೆ ಈಗ ನ್ಯಾಯಾಂಗದ ಆಶೀರ್ವಾದವು ದೊರೆತರೆ ಈ ಸಮಸ್ಯೆಯ ಪರಿಹಾರ ಊಹಿಸುವುದೇ ಕಷ್ಟ. ಹೆಣ್ಣಿನ ವಿವಾಹದ ವಯಸ್ಸನ್ನು ಹದಿನೆಂಟು ವರ್ಷಗಳಿಗೆ ನಿಗದಿಪಡಿಸುವ ಮತ್ತು ಅದನ್ನು ಕಾನೂನು ಸಮ್ಮತಗೊಳಿಸುವ ಪ್ರಕ್ರಿಯೆಯ ಹೋರಾಟದಲ್ಲಿ ನಮ್ಮ ದೇಶದ ಆರಂಭದ ಸಮಾಜ ಸುಧಾರಕರು ಬಹಳವಾಗಿ ಶ್ರಮಿಸಿದ್ದಾರೆ. ಹಲವಾರು ಮನಸ್ಸುಗಳು, ಚೇತನಗಳು ಈ ಸುದುದ್ದೇಶಕ್ಕಾಗಿ ಹೋರಾಡಿವೆ. ಭಾರತೀಯ ಸಂವಿಧಾನದತ್ತವಾಗಿ ಹೆಣ್ಣು ಪಡೆದುಕೊಂಡ ಈ ಮಾನವೀಯ ಹಕ್ಕಿನ ಉಲ್ಲಂಘನೆಯಾಗುವಂತೆ ನೀಡಲಾಗಿರುವ ಈ ತೀರ್ಪಿನ ಉದ್ದೇಶವಾದರೂ ಏನು, ಎಂಬುದು ಸ್ಪಷ್ಟವಾಗುತ್ತಿಲ್ಲ.

ಬಾಲ್ಯ ವಿವಾಹದ ಕಹಿಯನ್ನು ಜೀವನದಲ್ಲಿ ಅನುಭವಿಸಿ ಅದರ ವಿರುದ್ಧ ಸಿಡಿದೆದ್ದು ಜನರ ನಡುವೆ ಪ್ರಚಾರ ಮಾಡುತ್ತಿದ್ದ ಭಾಂವ್ರಿದೇವಿಗೊದಗಿದ ಗತಿ ಇಂದು ನಮ್ಮ ಕಣ್ಣಮುಂದಿದೆ. ರಾಜಸ್ಥಾನ ಸರ್ಕಾರದ 'ಮಹಿಳಾ ಅಭಿವೃದ್ಧಿ ಯೋಜನೆ'ಯಡಿ ಸಾಮಾಜಿಕ ಬದಲಾವಣೆಗಾಗಿ 'ಸಾಥಿನ್' ಆಗಿ ದುಡಿಯುತ್ತಿದ್ದ ಮಹಿಳೆ ಭಾಂವ್ರಿದೇವಿ ತನ್ನ ಕರ್ತವ್ಯವನ್ನು ಗಂಭೀರವಾಗಿ ತೆಗೆದುಕೊಂಡು ಊರ ಪಟೇಲನ ಮನೆಯಲ್ಲಿ ನಡೆಯಲಿದ್ದ ಒಂದು ವರ್ಷ ವಯಸ್ಸಿನ ಮಗುವಿನ ವಿವಾಹವನ್ನು ನಿಲ್ಲಿಸಿದ್ದಕ್ಕೆ ಪಡೆದ ಶಿಕ್ಷೆ ಅವಳ ಮೇಲೆ ಎರಗಿದ ಸಾಮೂಹಿಕ ಅತ್ಯಾಚಾರ. 1995 ರಲ್ಲಿ ಜಯಪುರ ಜಿಲ್ಲಾ ಮತ್ತು ಸೆಷನ್ಸಿನ ನ್ಯಾಯಾಧೀಶರು ಭಾಂವ್ರಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಬಂಧಿಸಿದ್ದ ಐದು ಮಂದಿ ಆರೋಪಿಗಳನ್ನು ಬಿಡುಗಡೆ ಮಾಡಿದರು. ಆಗ ನ್ಯಾಯಾಲಯ 'ಈ ಆರೋಪಿತರು 50 ರಿಂದ 60ರ ವಯಸ್ಸಿನಲ್ಲಿದ್ದು ಗೌರವಾನ್ವಿತ ಕುಟುಂಬದಿಂದ ಬಂದವರು, ಅವರು ಮಾನಭಂಗ ಮಾಡಲು ಸಾಧ್ಯವಿಲ್ಲ, ತಮ್ಮ ವಯಸ್ಸು, ಜಾತಿ ಮರೆತು ಇಂಥ ಕೆಲಸ ಮಾಡುವಷ್ಟು ನಮ್ಮ ಭಾರತೀಯ ಸಂಸ್ಕೃತಿ ಅಧೋಗತಿಗಿಳಿದಿಲ್ಲ', ಎಂದು ಹೇಳಿ ಬಿಡುಗಡೆ ಮಾಡಿದ್ದು ಮಹಿಳಾ ಜಾಗೃತಿಗೆ ಹೋರಾಡುತ್ತಿರುವ ಪ್ರತಿಯೊಬ್ಬರಿಗೂ ಆಘಾತ ತಂದ ತೀರ್ಪಾಗಿತ್ತು. ಏಕೆಂದರೆ 1979ರ ಮಥುರಾ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಮತ್ತು ನಂತರದ 1981 ರಫೀಕ್ ಪ್ರಕರಣದಲ್ಲಿ ಮತ್ತು ನಂತರದ ಇನ್ನು ಹಲವಾರು ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಸಾಕಷ್ಟು ಪ್ರಗತಿಪರ ತೀರ್ಪುಗಳನ್ನು ನೀಡಿರುವಾಗ ಭಾಂವ್ರಿದೇವಿಯ ಪ್ರಕರಣವೇ ಮಹಿಳಾ ಚಳುವಳಿಗೆ ಒಂದು ಆತಂಕವನ್ನು ಒಡ್ಡಿತು. ಭಾಂವ್ರಿದೇವಿಯ ಹೆಸರಿನಲ್ಲಿ ಶ್ರಮಿಕ ಮಹಿಳಾ ಸಮುದಾಯ ಸಾಕಷ್ಟು ಪರಿಹಾರಗಳನ್ನು ಪಡೆಯುತ್ತಿದ್ದಾಗ್ಯೂ ಭಾಂವ್ರಿದೇವಿಗೇ ಇನ್ನೂ ನ್ಯಾಯ ಸಿಕ್ಕಿಲ್ಲ. ಕೆಳಹಂತದ ನ್ಯಾಯಾಲಯಗಳ ಈ ವರ್ತನೆಗೆ ಅಂಕುಶವೇ ಇಲ್ಲವೇ? ಎಂಬ ಆತಂಕ ಮೂಡುತ್ತದೆ.

ಮಹಿಳಾ ಅನಾರೋಗ್ಯ, ಶಿಶು ಮರಣ, ಅನಕ್ಷರತೆ, ಸಾಮಾಜಿಕ ಅಸಮಾನತೆ, ಎಲ್ಲಕ್ಕೂ ಕಾರಣವಾಗುವ ಈ ಬಾಲ್ಯ ವಿವಾಹವನ್ನು ಸಮರ್ಥಿಸುವಾಗ ನ್ಯಾಯಾಲಯ ಆಧರಿಸಿರುವ ತರ್ಕವಾದರೂ ಏನು? ಹದಿನೈದು ವರ್ಷಗಳಿಗೇ ಇಂದು ಮಕ್ಕಳಿಗೆ ನ್ಯಾಯಾನ್ಯಾಯ ವಿವೇಚನಾಶಕ್ತಿ ಬಂದಿರುತ್ತದೆಂಬುದು ಎಷ್ಟು ಸರಿ? ಪ್ರೀತಿ, ಪ್ರೇಮವನ್ನು ರ್‍ಯೊಮ್ಯಾಂಟಿಕ್‌ಗೊಳಿಸಲು ಬಾಲ್ಯವಿವಾಹ ಒಂದು ಅಸ್ತ್ರವಾಗಬೇಕೆ? ಜಾಗತೀಕರಣದ ಹೆಸರಿನಲ್ಲಿ ಅಮೆರಿಕೆಯಂತೆ ಭಾರತವನ್ನೂ ಮಾಡಬೇಕೆಂಬ ಹುಚ್ಚು ಸಾಹಸವೇ? ಅಮೆರಿಕೆಯಲ್ಲಿರುವ ಅಪ್ರಾಪ್ತ ವಯಸ್ಕ ತಾಯಂದಿರ ಸಮಸ್ಯೆಯನ್ನು ಭಾರತಕ್ಕೂ ಎಳೆದು ತರಬೇಕೆ? ಈ ಪ್ರಶ್ನೆಗಳಿಗೆ ನಾವು ಮೊದಲು ಉತ್ತರ ಕಂಡುಕೊಳ್ಳಬೇಕಾಗಿದೆ.

ಇಪ್ಪತ್ತೊಂದನೆಯ ಶತಮಾನದಲ್ಲಿ ಪ್ರಗತಿಯತ್ತ ದಾಪುಗಾಲಿನಿಂದ ಸಾಗುತ್ತಿದ್ದೇವೆಂಬ ಭ್ರಮೆಯಲ್ಲಿರುವ ಭಾರತದಲ್ಲಿ ಹಲವಾರು ಪ್ರಗತಿಪರ ತೀರ್ಪುಗಳು, ಕ್ರಮಗಳು ತಿರುಗುಮುರುಗು ಆಗುತ್ತಿರುವುದು ನಿಜಕ್ಕೂ ಖೇದದ ಸಂಗತಿ. ಒಂದು ಹೆಜ್ಜೆ ಮುಂದಿಟ್ಟು ಎರಡು ಹೆಜ್ಜೆ ಹಿಂದಿಟ್ಟರೆ ನಾವು ಗುರಿ ತಲುಪುವುದೆಂದು ?

- ಎನ್. ಗಾಯತ್ರಿ

ದಾನ

-ಹೆಚ್. ನಾಗವೇಣಿ

ಬಾಕ್ಯಾರು ಗುತ್ತಲ್ಲಿ ನಿನ್ನೆ ಬಾಣಂತಿ ಎದ್ದಾಯ್ತಂತೆ! ಗುತ್ತಿನ ಬಾಣಂತನವೆಂದರೆ ಎಲ್ಲರಿಗೂ ಒಂಥರಾ ಕಣ್ಣರಳಿಕೆಯೆ. ಅಲ್ಲಿನದು ಅಂತಿಂಥ ಬಾಣಂತನವಲ್ಲ, ಹಸಿಬಾಣಂತಿ ತುಪ್ಪದಲ್ಲಿ ಮುಳುಗಿ ಲೇಹ್ಯ - ಕಷಾಯಗಳಲ್ಲಿ ತೇಲಬೇಕು. ಆ ಲೇಹ್ಯ ಕಷಾಯಗಳೇನು ಒಂದು ಜಾತಿಯವೇ ! ನೂರಾರು ಜಾತಿಯವು. ಇವೆಲ್ಲದರ ಜತೆಗೆ ಹತ್ತಿಪ್ಪತ್ತು ನಮೂನೆಯ ಸಂಬಾರ ಗಂಜಿಗಳ ಹಿಮ್ಮೇಳ ಬೇರೆ. ಮೈ ತಂಪಿಗೆ ಒಂದಾದರೆ.... ಮೊಲೆ ಹಾಲು ಉಕ್ಕಿಸಲು ಇನ್ನೊಂದು.... ಉಷ್ಣಕ್ಕೊಂದು..... ಶೀತಕ್ಕೊಂದು, ಸೊಂಟ ನೋವು ತಗ್ಗಿಸಲು ಮತ್ತೊಂದು. ಹೀಗೆ ಬಾಣಂತಿಯ ಸುತ್ತ ಇವುಗಳದ್ದೇ ರಂಪಾಟ.

ಒಟ್ಟಾರೆ ಗುತ್ತಿನ ಒಡತಿ ಸೀತಕ್ಕೆಯವರು ನೇರ ತಾನೇ ನಿಂತು ಮಾಡುವ ಬಾಣಂತನವೆಂದರೆ ಅದು ನಿಜಕ್ಕೂ ಒಂದು ಸಾಂಪ್ರದಾಯಿಕ ಬಾಣಂತನವೆ. ಅದರಲ್ಲೊಂದು ಅಬ್ಬರದ ಕಳೆ ಇದ್ದೇ ಇದೆ. ಅಂತ ಹಾಗೆ ಗುತ್ತಿನ ಮನೆಯ ಬಾಣಂತನದ ವೈಭವ ಅಬ್ಬರ ಊರವರಿಗೆ ತಿಳಿಯುವುದೇ ದಿನಾ ಅಲ್ಲಿಂದ ಬೀಸಿ ಬರುವ ತುಪ್ಪದಲ್ಲಿ ಬೇಯುವ ಲೇಹ್ಯ; ಸಂಬಾರಗಳ ಪರಿಮಳದಿಂದ; ಕಷಾಯ - ಮದ್ದುಗಳ ಕಮಟಿನಿಂದ. ಅದರಲ್ಲೂ ತುಪ್ಪದಲ್ಲಿ ಹುರಿವ ಮೆಂತೆ - ಬೆಳ್ಳುಳ್ಳಿಗಳ ಪರಿಮಳಕ್ಕೆ ಬರೀ ಊರಿನ ಹೆಂಗಸರ್‍ಯಾಕೆ, ಗಂಡಸರೂ ಕೂಡಾ ಬಾಣಂತನದ ಸುಖವನ್ನೊಮ್ಮೆ ಅನುಭವಿಸಲು ಹಾತೊರೆಯಬೇಕು ! ಅಂಥಾ ಹಿತವಾದ ಪರಿಮಳ ಆ ಬಾಣಂತಿಲೇಹ್ಯ, ಪರಿಕರಗಳದ್ದು.

ಈ ಪರಿಯ ಗುತ್ತಿನ ಮರ್ಜಿಯಲ್ಲಿ, ಲೇಹ್ಯ - ಕಷಾಯಗಳ ಕಾರುಬಾರಲ್ಲಿ ಬಾಣಂತನ ಮಾಡಿಸಿಕೊಂಡೆದ್ದ ಅಲ್ಲಿನ ಬಾಣಂತಿಯರ ಚಂದವನ್ನೊಮ್ಮೆ ನಾವು ನೋಡಬೇಕು! ಆ ಸೋರೆ ಹೂ ನಾಚಿ ಬಾಡಬೇಕು... ಅಷ್ಟೆ ಬಾಣಂತನ ಮಾಡುವ ಆ ಗುತ್ತಿನ ಶೆಡ್ತಿಯವರನ್ನು ಕೊಂಡಾಡದವರು ಕೊಂಡಾಡಬೇಕು! ಬಾಣಂತಿಯರಂತೂ ಚಂದದಲ್ಲಿ ಸೋರೆಯ ಹೂವಿಗಿಂತಲೂ ನೂರು ಪಟ್ಟು ಅಂದ... ಅಷ್ಟೊಂದು ಚಂದ! ಬಾಕ್ಯಾರು ಗುತ್ತಲ್ಲಿ ಇದೇನು ಮೊದಲ ಬಾಣಂತನವಲ್ಲ, ಇದು ಏಳನೇಯ ಬಾಣಂತನ. ಈಗಾಗಲೇ ಗುತ್ತಿನೊಡತಿ ತನ್ನ ಮೊದಲ ಮೂವರು ಹೆಣ್ಣು ಮಕ್ಕಳಿಗೆ ತಲಾ ಎರಡೆರಡು ಬಾಣಂತನ ಮಾಡಿ ಮುಗಿಸಿದ್ದಾರೆ. ಇದೀಗ ಕಡೇ ಮಗಳ ಮೊದಲ ಬಾಣಂತನವಿದು.

ಇದು ಮುಂಜಾನೆ, ಸೂರ್ಯದೇವರು ತನ್ನ ರಂಗಸ್ಥಳವನ್ನು ದಿಗಿಣಕ್ಕಾಗಿ ಏರಿದ್ದಾರಷ್ಟೆ, ಎಳೆಬಿಸಿಲು ಅಂಗಳಪೇರುವ ಹೊತ್ತು. ಭೇಷ ತಿಂಗಳ ಕಾಲವಾದ್ದರಿಂದ ಚಳಿಗಿಳಿ ಸರ್ವನಾಶವಾಗಿತ್ತು, ಆ ಎಳೆ ಬಿಸಿಲಿಗೇ ಸಾಕಷ್ಟು ಕಾವಿತ್ತು. ಅದೇ ಮಗು ಮೀಯಿಸುವುದಕ್ಕೆ ಹೇಳಿ ಮಾಡಿಸಿದ ಹೊತ್ತು, ಮಗುವಿಗೆ ಅರಿಭಟ್ರ ಎಣ್ಣೆಯನ್ನೋ ಅಥವಾ ಹಸಿಮೊಟ್ಟೆಯನ್ನೋ ಹಚ್ಚಿ ಅಡಿಕೆ ಹಾಳೆಯಲ್ಲಿ ಮಲಗಿಸಿ ಎಳೆಬಿಸಿಲ ಹಿತಕ್ಕೆಂದು ಸ್ವಲ್ಪ ಹೊತ್ತು ಕೆಳಜಗಲಿಯಲ್ಲಿಟ್ಟರೆ... ಅದು ಅಲ್ಲೇ ಉಚ್ಚೆ ಮಾಡುತ್ತಾ ಅದರೊಳಗೇ ಮಿಸುಕಾಡುತ್ತಾ ಹೊರಜಗತ್ತಿನ ಚಂದವನ್ನು ಹೂಕಣ್ಣು ಅರಳಿಸಿ ನೋಡುವ ಸಡಗರವೇನು! ತನ್ನದೇ ಆದ ಭಾಷೆಯಲ್ಲದ ಭಾಷೆಯಲ್ಲಿ ವರ್ಣಿಸುವ ಚಂದವೇನು! ಕಾಲು ತಟಪಟ... ತುಟಿಯಲ್ಲೊಂದು ಹೂ ನಗು. ಆಗೊಮ್ಮೆ ಈಗೊಮ್ಮೆ ಬಾಯಲ್ಲೇನೊ ಸಣ್ಣಗೆ ಉದ್ಗಾರ! ಬಾಣಂತಿ ಕೋಣೆಯ ಕತ್ತಲೆಗೂ... ಈ ಹೊತ್ತಿನ ಬೆಳಕಿಗೂ ಇರುವ ಪರಾಕನ್ನು (ವ್ಯತ್ಯಾಸ) ಮಗು ಅಳೆದು ಹೇಳುವ ಪರಿಯದು. ಮಗುವಿನ ಆ ಸಂಭ್ರಮವನ್ನು ವರ್ಣಿಸಲು ಯಾವ ಭಾಷೆ, ಪದ, ವ್ಯಾಕರಣವೆಲ್ಲ ಸಾಕಾದೀತು?

ಇದೀಗ ಗುತ್ತಿನ ಒಡತಿ ತನ್ನ ಚಾಚಿದ್ದ ಕಾಲಲ್ಲಿ ಹಸುಗೂಸನ್ನು ಮಲಗಿಸಿಕೊಂಡು ಮೈಗೆ ಹಸಿಮೊಟ್ಟೆ ಹಚ್ಚುತ್ತಿದ್ದಾರೆ. ಮುಖ, ಎದೆಗೆ ಮೊಟ್ಟೆಯ ಲೋಳೆ ಹಚ್ಚಿ ನವಿರಾಗಿ ತಿಕ್ಕುತ್ತಾ.... ಇನ್ನೇನು ಹೊಟ್ಟೆಗೆ ಕೈ ಹಚ್ಚಬೇಕೆನ್ನುವಷ್ಟರಲ್ಲಿ ಮಗು ಇದ್ದಕ್ಕಿದ್ದಂತೆ ಚಡಪಡಿಸ ತೊಡಗಿತು. ಅರೆರೆ... ಎಲ್ಲರೂ ನೋಡುತ್ತಿದ್ದಂತೆ ಕಣ್ಣುಗಳನ್ನು ಮೇಲುಗಣ್ಣು ಮಾಡಿ ತಲೆ ವಾಲಿಸಿತು; ಬಾಯಲ್ಲಿ ನೊರೆಯುಕ್ಕಿ ಬಂತು. ಕೈ ಕಾಲು ಸೆಟೆದುಕೊಂಡಿತು. ಮಗುವಿನ ಎಡಪಕ್ಕದಲ್ಲೇ ಕೂತು, ಅದರ ನಗುವ ಸುಳಿಯಲ್ಲೆ ಮುಳುಗಿ ಹೋದಂತಿದ್ದ ತಾಯಿ ಸುಶೀಲೆಗೆ ಈ ದೃಶ್ಯ ಕಂಡು ಎದೆಯೇ ಬತ್ತಿ ಹೋದಂತಾಗಿ ಕಣ್ಣಿಗೆ ಬವಳಿ ಬಂದಂತಾಯಿತು. ಆಕೆಯ ಅಂತರಂಗದ ವಹಿವಾಟುಗಳೆಲ್ಲ ಏರುಪೇರಾದವು. ಅಧೀರಳಾಗಿ ಏನೊಂದು ಮಾತಿಲ್ಲದೆ ಕುಸಿದು ಕುಳಿತಳು. ಅಲ್ಲೇ ಕಂಬಕ್ಕೊರಗಿ ಕೈ ಕಟ್ಟಿ ನಿಂತು ಬಾಯೊಳಗಿನ ವೀಳ್ಯವನ್ನು ನಯಗೊಳಿಸುತ್ತಾ ಮೊಮ್ಮಗನ ಚಂದವನ್ನು ದಿಟ್ಟಿಸುತ್ತಿದ್ದ ಗುತ್ತಿನೊಡೆಯ ಸಂಕಪ್ಪ ಶೆಟ್ಟರೂ ಎದೆಗುಂದಿದವರಂತಾಗಿ ಕಂಗೆಟ್ಟರು; ಅವರು ನಿಂತಲ್ಲಿಂದ ಮಿಸುಕಾಡಲಿಲ್ಲ.

ಧೃತಿಗೆಡದವರೆಂದರೆ ಗುತ್ತಿನ ಒಡತಿ ಸೀತಕ್ಕೆಯವರು ಮಾತ್ರ. ತಾನು ಧೈರ್ಯಗೆಟ್ಟರೆ ಮನೆಯವರೆಲ್ಲರ ಧೈರ್ಯ ಸಂಪೂರ್ಣ ಉಡುಗಿಹೋಗಬಹುದೆಂಬ ಮುನ್ನೆಚ್ಚರಿಕೆಯಿಂದ ಮಗುವಿಗೆ ಏನೇನೂ ಆಗಿಲ್ಲ ಎಂಬಂತಹ ಮುಖಭಾವ ತೋರಿ, ಮಗುವಿಗೆ ಉಸಿರು ಮರಳಿಸುವ ಪ್ರಯತ್ನ ಮುಂದರಿಸಿದ್ದರು. ಉಸಿರುಗಟ್ಟಿ ಮೇಲ್ಗಣ್ಣು ತೇಲ್ಗಣ್ಣು ಮಾಡುತ್ತಿದ್ದ ಮಗುವಿನ ಬಾಯಂಗಳಕ್ಕೆ ಬಲಗೈಯ ತೋರು ಬೆರಳು ತೂರಿಸಿ ಗಂಟಲ ಕಫ ಜಾರಿಸಿದರು. ಹಾಗೆಯೇ ಮಗುವಿನ ತಲೆಯನ್ನು ಗದ್ದ ಹಿಡಿದು ಮೇಲೆತ್ತಿ ಗಾಳಿಯಲ್ಲಿ ಅರೆಗಳಿಗೆ ತೇಲಾಡಿಸಿದರು. ಮಗುವಿನ ಹೋದ ಜೀವ ಮರಳಿ ಬಂತೇನೋ! ಮಗು ಕಿಟಾರನೆ ಕಿರುಚಿಕೊಂಡಿತು.

ಮತ್ತೆ ಜೀವಂತಿಕೆ ಪಡೆದುಕೊಂಡು ಮೊದಲಿನಂತಾಯ್ತು. ಕ್ಷಣ ಮಾತ್ರದಲ್ಲಿ ಮಗು ತೋರಿದ ಸಾವು-ಬದುಕಿನ ನಡುವಣ ಸತ್ಯ, ಅವೆರಡರ ಮಧ್ಯೆ ಇರುವ ಅತ್ಯಂತ ದುರ್ಬಲ ಎಳೆಯನ್ನು ಆ ಮಗು ಜಗ್ಗಿ ಬಂದ ಪಡಿ ಎಲ್ಲರನ್ನೂ ಚಿಂತೆಯ ಗೂಡಿಗೆ ತಳ್ಳಿ, ಅವರೆಲ್ಲರ ಜೀವವನ್ನು ಒಮ್ಮೆ ಕಲಕಿಬಿಟ್ಟಿತ್ತು.

ಸಾವನ್ನು ಆ ಎಳೆಜೀವ ಒಪ್ಪಿಕೊಳ್ಳದೆ ಹಿಂದಕ್ಕೆ ಬಂದಿತೋ? ಅಥವ ಮಗುವಿಗೆ ಮುಂದೆ ದಾರಿ ಸುಗಮವಾಗಲೆಂದು ಸಾವಿನ ಮನೆಯ ದಾರಿ ತೋರಿ ವಿಧಿ ಮರಳಿ ತಂದು ಬಿಟ್ಟಿತೋ? ಅಥವ ಕನಸಿಲ್ಲದ ನಿದ್ರೆಯದು ಎಂದು ಮಗುವೇ ಬೇಜಾರಿಗೆ ಹಿಂದಿರುಗಿ ಬಂತೇನೋ ಎಂಬಂತೆ ಅದು ಮತ್ತೆ ಸಹಜ ಸ್ಥಿತಿಗೆ ಮರಳಿದರೂ, ತಾಯಿ ಸುಶೀಲೆ ಮಾತ್ರ ಏನು ಮಾಡಿದರೂ ಆಕೆಯನ್ನು ಕವುಚಿದ್ದ ಸ್ಥಿತಿಯಿಂದ ಹೊರ ಬರಲಿಲ್ಲ. ತನ್ನ ಹೊಕ್ಕಳಬಳ್ಳಿ ಕಳಚಿಕೊಂಡು ಬಂದ ಈ ತನ್ನ ಜೀವ ಎಲ್ಲಿ ತನ್ನ ಕೈ ತಪ್ಪಿ ಹೋಗುತ್ತದೋ ಎಂಬ ಭಯದಲ್ಲಿ ಆಕೆ ಜೀವ ಹಿಂಡಿಕೊಂಡು ಇನ್ನೂ ಕುಸಿದೇ ಕುಳಿತಿದ್ದಳು.

ಗುತ್ತಿನಂಗಳದವರ ಮನೋರಂಗದಲ್ಲಿ ಒಮ್ಮೆಗೆ ಕತ್ತಲೆ ಕವಿದಂತಾಯ್ತು. ಬಾಕ್ಯಾರು ಗುತ್ತಿನ ಸಂತಾನ ಬಳ್ಳಿಯಲ್ಲಿ ಚಿಗುರೊಡೆದಿರುವ ಒಂದೇ ಒಂದು ಗಂಡು ಕುಡಿಯದು. ಗುತ್ತಿನೊಡೆಯರ ಎದೆ ಆ ಕ್ಷಣ ಒಡೆದೇ ಹೋಗಿತ್ತು. ಆ ಕ್ಷಣದ ಸತ್ಯವನ್ನು ಅರಗಿಸಿ ಕೊಳ್ಳಲು ಅವರು ನಿಶ್ಯಕ್ತರಾಗಿದ್ದರು. ಆದರೂ ಧೈರ್ಯ ತಂದುಕೊಳ್ಳಬೇಕಲ್ಲವೆ. ವ್ಯಾಕುಲಚಿತ್ತರಾದ ಒಡೆಯರು ತನ್ನನ್ನು ತಾನೇ ಸಾವರಿಸಿಕೊಂಡೆದ್ದು ತಟ್ಟನೆ ಮೊರೆಹೋದದ್ದು ಊರಿನ ವೈದ್ಯರನ್ನಲ್ಲ, ತಾನು ನಂಬಿದ್ದ ಚಾವಡಿಯೊಳಗಿನ ಭೂತಗಳನ್ನು. ಇಡೀಯ ಗುತ್ತನ್ನೇ ಆಧರಿಸಿಕೊಂಡು ಆಳುತ್ತಿರುವ ಆ ಕಾರಣಿಕ ಭೂತಗಳೆಂದೂ ಈ ನಂಬುಗೆಯ ಬಂಟನ ಕೈ ಬಿಡಲಾರವು ಎಂಬ ನಂಬುಗೆಯಿಂದ ಭೂತಸ್ಥಾನದೆದುರು ನಿಂತು, ಕಣ್ಣೀರ ಕೋಡಿ ಹರಿಸಿ ಮೊಮ್ಮಗನ ಆಯುರಾರೋಗ್ಯವನ್ನು ಬೇಡುತ್ತಾ ಸಾಷ್ಟಾಂಗ ಅಡ್ಡಬಿದ್ದರು. ಆ ಕಣ್ಣೀರಿಗೆ ಒಲಿಯದ ಭೂತಗಳೂ ಒಲಿದಾವು ! ಆದರೂ ಗುತ್ತಿನ ಧಣಿಗಳಿಗೆ ಇನ್ನೂ ಧೈರ್ಯ, ನೆಮ್ಮದಿ ಬಂದಂತಿಲ್ಲ. ಮತ್ತಷ್ಟು ದೈವ ದೇವರುಗಳ ಇಂಬು ತಮ್ಮ ಮೇಲಿರಲೆಂದು ಊರ ಗುಡಿ ಗುಂಡಗಳ ದೈವ - ದೇವರುಗಳಿಗೂ ಹರಕೆ ಹೊತ್ತರು. ಆದರೆ ಅದೂ ಅವರಿಗೆ ಸಮಾಧಾನ ತರದು. ನೇರ ಒಳ ಚಾವಡಿ ಹೊಕ್ಕು, ಮರದ ಕಲೆಂಬಿಯೊಳಗಿಂದ ಮಗುವಿನ ಜಾತಕ ತೆಗೆದು ಸೀದಾ ಹೊರಟರು - ಆ ಜಾತಕ ಬರೆದುಕೊಟ್ಟ ರಾಮ ಜೋಯಿಸ್ರ ಹಿತ್ತಲತ್ತ.

ಗುತ್ತಿನ ಶೆಡ್ತಿ ಹನಿಗಣ್ಣಾಗಿಯೇ ಮಗುವನ್ನು ಮೀಯಿಸಿ, ಲೋಭಾನದ ಹೊಗೆಯಲ್ಲಿ ಮಗುವನ್ನು ಬೆಚ್ಚಗಿರಿಸಿ ತೊಟ್ಟಿಲಲ್ಲಿ ಮಲಗಿಸುವಷ್ಟರಲ್ಲಿ ಗುತ್ತಿನೊಡೆಯರು ಜೋಯಿಸರ ಅಂಗಳವೇರಿಯಾಗಿತ್ತು.

ನಿಮಿತ್ತ ಹೇಳುವ - ಜಾತಕ ಓದುವ ಜೋಯಿಸರ ಮನೆಯಲ್ಲಿ ಆಗಲೇ ಜನಜಾತ್ರೆ. ಜಾತಕವಿಲ್ಲದ ಶೂದ್ರಾದಿ ಶೂದ್ರರಿಗೆ ಬರೀ ಕವಡೆ ಉದುರಿಸಿ ನಿಮಿತ್ತ ಹೇಳುವುದರಲ್ಲಿ ಈ ಜೋಯಿಸರದ್ದು ಎತ್ತಿದ ಕೈ. ಹಾಗೆಯೇ ಸಂಸ್ಕಾರವಂತ ಮಂದಿಗಳ ಜಾತಕ ಬರೆದು, ಓದುವುದರಲ್ಲೂ ಇವರಷ್ಟು ಪಳಗಿದವರು ಆ ಸೀಮೆಯಲ್ಲಿ ಬೇರ್‍ಯಾವನಿದ್ದಾನೆ ! ಎಲ್ಲಾ ತರದ ಜಾತಕಜನ್ಯ ದೋಷಗಳಿಗೆ, ನಿಮಿತ್ತದಲ್ಲಿ ತೋರಿ ಬರುವ ಗ್ರಹಬಾಧೆಗಳಿಗೆಲ್ಲ ಇವರ ಅಂಗಳದಲ್ಲೆ ದೋಷ ಪರಿಹಾರ ಸೇವೆಯೂ ಲಭ್ಯವಿದೆ. ವಾರದಲ್ಲಿ ಶುಕ್ರವಾರ ಮತ್ತು ಮಂಗಳವಾರವನ್ನು ದೋಷ ಪರಿಹಾರ ಪೂಜೆ ಪುರಸ್ಕಾರಗಳಿಗಾಗಿಯೇ ಮೀಸಲಿಟ್ಟಿದ್ದಾರೆ ಈ ಸುಜ್ಞಾನಿ ಜೋಯಿಸರು. ದುಷ್ಟ ಶಕ್ತಿಗಳನ್ನು ಸೀಮೆ ದಾಟಿಸುವಂತಹ ಮಂತ್ರಿಸಿದ ತಾಯಿತ, ನೂಲು, ತೆಂಗಿನಕಾಯಿಗಳನ್ನು ನಿಮಿತ್ತ ಹೇಳಿದ ಕ್ಷಣದಲ್ಲೇ ಒದಗಿಸುವುದಕ್ಕೆ ಒಂದು ಸಮರ್ಥ ವಿಪ್ರ ಪಡೆಯೂ ಅಲ್ಲಿದೆ.

ಇಂತಾ ಜನಜಾತ್ರೆ ಸೇರಿರುವ ಆ ಜೋಯಿಸರ ಅಂಗಳಕ್ಕೆ ಗುತ್ತಿನೊಡೆಯರು ಕಾಲಿಟ್ಟಾಗ ಜೋಯಿಸರು ಕಡಲಕರೆಯ ಬೆಸ್ತರ ಮಂದಿಗೆ ಕವಡೆ ಹಾರಿಸಿ ನಿಮಿತ್ತ ಹೇಳುವುದರಲ್ಲಿ ನಿರತರಾಗಿದ್ದರು. ಆದರೂ ಗುತ್ತಿನೊಡೆಯರು ಬಂದರೆಂದರೆ ಅವರಿಗೊಂದು ಮಣೆ ಮುಂದೆಯೇ. ಗುತ್ತಿನೊಡೆಯರನ್ನು ಕಣ್ಸನ್ನೆ, ಕಿರುನಗೆಯಲ್ಲೇ ಬರಮಾಡಿಕೊಂಡ ಜೋಯಿಸರು ಕೆಳಚಾವಡಿಯಲ್ಲಿಟ್ಟ ಮಣೆಯಲ್ಲಿ ಕೂರುವಂತೆ ಆ ಕಣ್ಸನ್ನೆಯಲ್ಲೇ ಸೂಚಿಸಿದರು.

ಬೆಸ್ತರಿಗೆ ಜ್ಯೋತಿಷ್ಯ ಹೇಳಿಯಾದೊಡನೆ ಜೋಯಿಸರು ನೇರ ಪ್ರಶ್ನಿಸಿದ್ದು ಗುತ್ತಿನ ಧಣಿ ಸಂಕಪ್ಪ ಶೆಟ್ಟರನ್ನು. ಜೀವ ತುಂಬಾ ದುಗುಡ, ದುಃಖ ತುಂಬಿಸಿಕೊಂಡಿದ್ದ ಶೆಟ್ಟರು ಕಣ್ಣು ಹನಿಸಿಕೊಂಡೆ ಮಗುವಿನ ವಿಚಾರ ಮುಂದಿಟ್ಟರು. ಮಗುವಿನ ಗ್ರಹಗತಿಯ ಬಗ್ಗೆ ಆತಂಕದಿಂದ 'ನಮ್ಮ ಬಳ್ಳಿಯಲ್ಲಿರುದು ಇದೊಂದೇ ಗಂಡು ಹೂ ಜೋಯಿಸ್ರೇ.... ಅದನ್ನು ಅರಳಿಸುದು ಬಿಡುದು ನಿಮ್ಮ ಕೈಯಲ್ಲಿದೆ' ಎಂದು ಎರಡು ಬೊಟ್ಟು ಕಣ್ಣೀರು ಉರುಳಿಸಿ ಜಾತಕವನ್ನು ಜೋಯಿಸ್ರತ್ತ ತಳ್ಳಿದರು.

''ಛೇ.... ಛೇ... ಎಂಥಾ ಮಾರಾಯ, ಒಮ್ಮೆ ಜಾತಕ ಜಾಲಾಡಿಸಿದ್ರೆ ಎಂಥಹ ಗ್ರಹ ದೋಷವೂ ನನ್ನ ಕಣ್ಣಿಗೆ ಕಟ್ಟಿ ಬರುತ್ತದೆ. ನೀನದಕ್ಕೆ ಸರಿಯಾದ ಪೂಜೆ ಪುರಸ್ಕಾರ ಮಾಡಿದರೆ ಮುಗಿಯಿತು. ಸ್ವಲ್ಪ ಹಣ ಕೈ ಬಿಡಬಹುದು ಅಷ್ಟೆ...''

''ಥೂ...! ಥೂ....! ಹಣದ ಮುಖವನ್ನೊಮ್ಮೆ ಹುಲಿ ಹಿಡಿಯಲಿ. ಗುತ್ತಿನ ಸಂಪತ್ತು ಮತ್ತ್ಯಾರಿಗೆ? ಮೊದಲು ಜಾತಕ ಓದಿ... ತೋರಿ ಬರದಿದ್ರೆ ಕವಡೆ ಹಾರಿಸಿ. ಯಾವುದರ ದಿಟ್ಟಿ ಎಂದು ಮೊದಲು ಪತ್ತೆ ಮಾಡಿ ನೋಡುವಾ....''

ಗುತ್ತಿನ ಧಣಿಗಳಂದದ್ದೇ ತಡ ಜೋಯಿಸರು ಕಣ್ಣರಳಿಸಿ, ಹುಬ್ಬು ಕುಣಿಸಿ, ಶಾಲು ಹೊದ್ದಿದ್ದ ಬರಿ ಮೈಯೊಳಗೆ ನೇತಾಡುತ್ತಿದ್ದ ಕೊಳೆಪೂರಿತ ಜನಿವಾರವನ್ನೊಮ್ಮೆ ಎಳೆಯುತ್ತ ಜಾತಕದ

ಅಧ್ಯಯನಕ್ಕೆ ತೊಡಗಿದ್ದರು. ಕೊನೆಗೂ ಸತ್ಯ ತೋರಿ ಬಂತು. ''ಮಗುವಿಗೆ ರಾಜಯೋಗ ಇದೆ; ಆದರೆ ಶನಿಯದ್ದು ಮೇಲುಗೈ - ಬಾರೀ ಕಾಟವಿದೆ. ಅನ್ನ ಪ್ರಾಶನವಾಗುವವರೆಗೆ ಪ್ರತೀ ಶನಿವಾರ ಮಗುವಿನ ಹೆಸರಲ್ಲಿ ಶನಿಪೂಜೆ - ಶನಿಕತೆ ತಪ್ಪಿಸುವಂತಿಲ್ಲ. ಈಶ್ವರ ದೇವಸ್ಥಾನದ ನೀಲಾಂಜನಕ್ಕೆ ಶನಿವಾರ ಶನಿವಾರ ಎಣ್ಣೆ ಸೇವೆ ಕಡ್ಡಾಯ. ಹಾಗೆಯೆ ಇದೇ ಅಮಾಸೆಗೆ ನಮ್ಮ ಅಜಲಿನ ಕೊರತಿಗೆ ಮಗು ದಾನ ಕೊಡುವ ಶಾಸ್ತ್ರವಂತೂ ಮಾಡಲೇ ಬೇಕು; ಜತೆಗೆ ಆಕೆಗೆ ಅನ್ನದಾನ ಎಣ್ಣೆದಾನ ಕೂಡ....''

ಜೋಯಿಸರ ಮಾತು ಕೇಳಿ ಶೆಟ್ಟರಿಗೆ ಒಂದು ಕ್ಷಣ ಮೌನ ಕವಚಿದಂತಾಗಿ ತಲೆಯಲ್ಲಿ ಒಂದೂ ಹೊಳೆಯದಂತಾಯ್ತು. ಆ ಶನಿಪೂಜೆ, ಶನಿಕತೆ ಮಾಡಿಸುವುದೇನು ದೊಡ್ಡ ಸಂಗತಿಯಲ್ಲ. ಈಗಲೂ ಅಷ್ಟೇ ಜೋಯಿಸರ ಹಿತ್ತಲಿಗೆ ಒಂದೆರಡು ಮುಡಿ ಅಕ್ಕಿ ಕಳಿಸಿ, ಅವರು ಹೇಳಿದಷ್ಟು ಹಣ ಎಸೆದು 'ಎಲ್ಲ ನೀವೇ ತರಿಸಿಕೊಂಡು, ನೀವೇ ತಯಾರು ಮಾಡಿಡಬೇಕು ಜೋಯಿಸ್ರೆ; ಬೇಕಿದ್ರೆ ಜನಿವಾರದವರಿಗೆ ಊಟವನ್ನೂ ಹಾಕಿಸಿ. ಶನಿವಾರ... ಶನಿವಾರ ಪೂಜೆಗೋ, ಕತೆ ಕೇಳುವುದಕ್ಕೋ ಬರುವುದು ಮಾತ್ರ ನಮ್ಮ ಕೆಲಸ' ಎಂದು ಹೇಳಿ ಕೈ ತೊಳೆದುಕೊಂಡರೆ ಮುಗಿಯಿತಲ್ಲಿಗೆ ತಾಪತ್ರಯ. ಆದರೆ ಒಡೆಯರ ಗಂಟಲು ಕಟ್ಟಿಸಿದ್ದು - ಕೊರತಿಗೆ ಅನ್ನದಾನ, ಎಣ್ಣೆದಾನ ಹಾಗೂ ಮಗುದಾನ ಮಾಡುವ ಶಾಸ್ತ್ರದ ವಿಚಾರ.

ಊರ ಅಜಲಿನ ಕೊರಗರಿಗೆ ಮಗುದಾನ ಮಾಡುವ ಶಾಸ್ತ್ರವೆಂದರೆ, ಮಗುವನ್ನು ಕೊರತಿಯ ಕೈಗೊಪ್ಪಿಸುವ ಮೂಲಕ ಮಗುವನ್ನು ಕಾಡುವ ಶನಿಯನ್ನು ಕೊರತಿಯ ಸಂತಾನಕ್ಕೆ ದಾಟಿಸಿಬಿಡುವುದು ಎಂದರ್ಥ. ಅನಾದಿ ಕಾಲದಿಂದಲೂ ಉಳ್ಳವರು, ಉಚ್ಚ ಕುಲದವರು ನಡೆಸಿಕೊಂಡು ಬಂದಿರುವ ಸಂಪ್ರದಾಯ, ಆಚಾರವಿದು. ಅಸ್ಪೃಶ್ಯತೆಯ ಕಿರೀಟ ಧರಿಸಿಕೊಂಡು ಹೊಟ್ಟೆಗಿಲ್ಲದೆ, ಕೈಯಲ್ಲಿ ದುಡಿತವಿಲ್ಲದೆ, ಭೂಮಿ ಕಾಣಿಯೂ ಇಲ್ಲದೆ ಕಾಡಿನಂಚಿನಲ್ಲಿ ಹೀನ-ದೀನ-ದರಿದ್ರ ಬದುಕನ್ನು ಸವೆಸುತ್ತಿದ್ದ ಶಾಪಗ್ರಸ್ತ ಕೊರಗ ಸಂತಾನಗಳು, ಇಂತಹ ದುಷ್ಟ ಅನಿಷ್ಟ ಕುಟಿಲ ಆಚಾರ ಸಂಪ್ರದಾಯಗಳ ಬಗ್ಗೆ ವಿವೇಚನೆಯಿಲ್ಲದೆ, ನಾ ಮುಂದು - ತಾ ಮುಂದು ಎಂದು ನುಗ್ಗಿ ಬಂದು ಆ ಶಾಸ್ತ್ರ ನಡೆಸಿಕೊಡುವ ಕಾಲವೊಂದಿತ್ತು. ಉಳ್ಳವರ ಮನೆಯಿಂದ ಇಂತಹ ಶಾಸ್ತ್ರಕ್ಕೆ ಕರೆ ಬಂದರೆ ಸಾಕು, ಅಂದು ಇಡೀ ಸಂತಾನವೇ ಎದ್ದು ಬಿದ್ದು ಓಡಿ ಬರುವ ಪರಿಯೇನು! ಎಂಜಲ ಬುಟ್ಟಿ ಕೈಯಲ್ಲಿ... ಎಂಜಲುಗುಳುವ ಗೆರಟೆಯೊಂದು ಕೊರಳಲ್ಲಿ. ಉಚ್ಚಕುಲದವರ ಭೂಮಿಯ ಮೇಲೆ ಉಗುಳು ಬಂದರೆ ಎಂಬ ಮುನ್ನೆಚ್ಚರಿಕೆಗಾಗಿ ಈ ಗೆರಟೆ ; ಎಣ್ಣೆದಾನ, ಅನ್ನದಾನದ ಜತೆಗೆ ಮತ್ತಷ್ಟು ಎಂಜಲು ಸಿಕ್ಕಿದರೆ ಎಂಬ ಆಸೆಯಿಂದ ಆ ಎಂಜಲು ಬುಟ್ಟಿ.

ಈಗ ಕಾಲ ಬದಲಾಗಿದೆ. ಈ 'ಕೆಟ್ಟಕಾಲ'ವೇ ಗುತ್ತಿನೊಡೆಯರ ಗಂಟಲು ಕಟ್ಟಿಸಿದ್ದು. ಕೊರಗರೀಗ ಎಚ್ಚೆತ್ತಿದ್ದಾರೆ. ಸಂಪ್ರದಾಯದ ಹೆಸರಲ್ಲಿ ಆಚಾರ ಕಟ್ಟಳೆಗಳ ನೆಪದಲ್ಲಿ ತಮ್ಮ ಮೇಲೆ ಸವರ್ಣಿಯರು ನಡೆಸುವ ಕ್ರೌರ್ಯ, ಶೋಷಣೆಗಳನ್ನು ನಿಧಾನವಾಗಿ ಅವರು ಅರ್ಥೈಸುತ್ತಿದ್ದಾರೆ. ಈಗೇನಾದರೂ ಗುತ್ತಿನೊಡೆಯರು ಅಜಲಿನ ಕೊರತಿ ಕುಡ್ವುವಿಗೆ, 'ಮಗುವನ್ನು ಕೈ ಹಗರಿಸುವ ಶಾಸ್ತ್ರ'ಕ್ಕೆ ಬರಬೇಕಂತೆ ಎಂದು ಹೇಳಿ ಕಳುಹಿಸಿದರೆ, ಆಕೆಯ ಮಗ ಅವನೇ ಕೆಂಜಾರು ಶಾಲೆಯ ಮಾಷ್ಟ ಕೇತು 'ನಮ್ಮನೆಯ ಮಗು ಹಗರಿಸುವ ಶಾಸ್ತ್ರಕ್ಕೆ ನಿಮ್ಮ ಹೆಂಡತಿಯನ್ನು ಕಳುಹಿಸಿ' ಎಂದು ಹೇಳಿದರೂ ಹೇಳುವವನೆ! ಆ ಅವಮಾನವನ್ನು ತನ್ನಿಂದ ಸಹಿಸಲಾದೀತೆ! ಇದೇ ಭಯದಿಂದ ಜೋಯಿಸರ ದೋಷ ಪರಿಹಾರದ ಪರಿ ಕೇಳಿದೊಡನೆ ಸಂಕಪ್ಪ ಶೆಟ್ಟರಿಗೆ ಎದೆ ಕಟ್ಟಿದಂತಾಗಿದ್ದು.

ಮೊನ್ನೆ ಕೂಳೂರಿನ ಸಂಕಮಾರು ಗುತ್ತಿನ ಕಂಬಳದಂದು, ಇದೇ ಅಜಲಿನ ಕೊರಗನಿಗೆ ಊರಿಗೆ ಕಂಬಳ ಸಾರುವ ಡೋಲಿನ ಶಾಸ್ತ್ರಕ್ಕೆ ಹಾಗೂ ಕಂಬಳದ ಹಿಂದಿನ ರಾತ್ರಿಯ 'ಪನಿಕುಲ್ಲುನ' ಶಾಸ್ತ್ರಕ್ಕೆ ಹೇಳಿ ಕಳುಹಿಸಿದರೆ ಒಂದು ನರಪಿಳ್ಳೆಯೂ ಬರಲಿಲ್ಲವಂತೆ! ಗುತ್ತಿನ ಯಜಮಾನರು ಸ್ವತಹ ತಾವೇ ಹೋಗಿ ವಿಚಾರಿಸಿದರೆ ಮಗ ಕೇತು ಕೊಟ್ಟ ಉತ್ತರವೆಂದರೆ, 'ನನ್ನಪ್ಪನಿಗೆ ಆ ಕಾಲದಲ್ಲಿ ಊರಿನ ದೊಡ್ಡವರು ಅಜಲಿನ ಕೆಲಸಕ್ಕಾಗಿ ಕೊಟ್ಟ ಡೋಲು ಇಲ್ಲೇ ಜೋತು ಬಿದ್ದಿದೆ ನೋಡಿ ಶೆಟ್ರೇ....; ಬೇಕಿದ್ರೆ ನಿಮ್ಗೇ ವಾಪಾಸು ಕೊಡುತ್ತೇನೆ. ನಿಮ್ಮಲ್ಲೇ ಯಾರಾದ್ರೂ ಆ ಶಾಸ್ತ್ರ ಮುಗಿಸಿಬಿಡಿ; ಇನ್ನು ಮುಂದೆ ಇದಕ್ಕೆಲ್ಲ ನಮ್ಮ ಕೇರಿಗೆ ಕರೆಯಲು ಬರಬಾರದು ನೋಡಿ' ಎಂದು ಎಚ್ಚರಿಸಿ ಕಳಿಸಿದ್ದನಂತೆ. 'ಉಳ್ಳಾಯ.... ಉಳ್ಳಾಯ...' ಎನ್ನುತ್ತಾ ತನ್ನಂತ ಉಳ್ಳವರನ್ನು ಅತ್ಯಂತ ಮರ್ಯಾದೆಯಿಂದ ಕರೆಯುತ್ತಿದ್ದ ಆ ಪಡೆನಾಯಿ ತನ್ನನ್ನು 'ಶೆಟ್ರೆ....' ಎಂದು ಸಂಬೋಧಿಸಿದ್ದು ಸಂಕಮಾರು ಗುತ್ತಿನ ಒಡೆಯರ ಪಿತ್ತವನ್ನು ಕೆರಳಿಸಿತ್ತು. ಆದರೇನು ಕೊರಗರನ್ನು ಮುಟ್ಟಿದ್ರೆ ಗೋರ್ಮೆಂಟು ಮಾತ್ರ, ಯಾರು ಏನು ಎಂಥದ್ದು ಎಂದು ಹಿಂದೆ ಮುಂದೆ ನೋಡದೆ ಜೈಲಿನ ಒಳ ತಳ್ಳಿ ವರ್ಷಗಟ್ಟಲೆ ರಾಗಿಗಂಜಿ ಕುಡಿಸುತ್ತದೆ ಎಂಬ ಭಯದಲ್ಲಿ ತನ್ನ ಆ ಪಿತ್ತವನ್ನು ಬಲವಂತವಾಗಿ ಕೆಳಗಿಳಿಸಿಕೊಂಡಿದ್ದರು.

ಈ ಘಟನೆಯ ನಂತರ ಹೆಚ್ಚಿನ ಮೇಲ್ಜಾತಿ ಮಂದಿ ಕೊರಗರ ಕೇರಿಯತ್ತ ಮುಖ ಹಾಕುದನ್ನೇ ಕಮ್ಮಿ ಮಾಡಿದ್ದಾರೆ. 'ಸುಮ್ಮನೆ ಹೇಸಿಗೆಗೆ ಕಲ್ಲು ಹಾಕಿ ಅದನ್ನು ಮುಖಕ್ಯಾಕೆ ಸಿಡಿಸಿಕೊಳ್ಳಬೇಕು' ಎಂಬ ನಿಲುವು ಕೆಲವರದ್ದಾದರೆ, 'ಆ ಕೊರಗನ ಕುಂಡೆಯಿಂದಲೇ ಬೆಳಗಾಗುದಾ ನೋಡೋಣ.... ಅಜಲಿನ ಶಾಸ್ತ್ರವನ್ನೆ ಮಾಡದಿದ್ದರೇನಂತೆ' ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಇನ್ನೂ ಕೆಲವು ಹಳೆ ತಲೆಗಳು ಹಳೆಯ ರೀತಿ ರಿವಾಜು ಕಟ್ಟುಕಟ್ಟಳೆಗಳನ್ನು ಬಿಡಲಾಗದೆ, ಅಜಲಿನ ಪದ್ಧತಿಗಳಿಗೆ ಎಳ್ಳುನೀರೂ ಬಿಡದೆ ಕೊರಗರ 'ಮನ ಪರಿವರ್ತನೆ'ಗೆ ಎದುರು ನೋಡುತ್ತಿದ್ದಾರೆ. 'ಅಂವು ಕೊರಗ ಮಕ್ಕಳು ವಿರೋಧಿಸಿದವೆಂದು ತಲೆ ತಲಾಂತರದಿಂದ ಕಟ್ಟಿಕೊಂಡು ಬಂದಿರುವ ಆ ಅಜಲು

ಪದ್ಧತಿಯನ್ನು ಹಾಗೇ ಬಿಟ್ಟು ಬಿಡಲಿಕ್ಕಾಗುತ್ತಾ....? ಇವತ್ತು ಅವರು ಹೇಳಿದರೆಂದು ನಾವು ಬಿಟ್ಟರೆ ನಾವು ಅಂವು ನಮ್ಮ ತಲೆ ಹತ್ತಿ ಕೂತು ಹೇತು ಬಿಡುತ್ತವೆ. ಲಗಾಮು ತಪ್ಪಿದಂತಾಗಿ ನಮಗೇ ಕೇಡು ತಂದಿಡುತ್ತವೆ' ಎಂದು ಜೋಯಿಸರಂತಹ ಅದೆಷ್ಟೋ ಸಂಪ್ರದಾಯದ ತಲೆಗಳು ಮರೆಯಲ್ಲಿ ವಾದಿಸಿ ಬೋಧಿಸಿದ್ದೂ ಇದೆ.

ಇದೀಗ ಗುತ್ತಿನೊಡೆಯ ಸಂಕಪ್ಪ ಶೆಟ್ಟರ ಬಾಡಿದ ಮುಖಚರ್ಯೆ, ಅದನ್ನು ಕವಚಿಕೊಂಡ ಮೌನದ ಪೊರೆ ಜೋಯಿಸರ ಗಮನ ಸೆಳೆಯದಿರಲಿಲ್ಲ. ಚಿಂತಾಕ್ರಾಂತರಾದ ಶೆಟ್ಟರನ್ನು ದಿಟ್ಟಿಸುತ್ತಲೇ ಜೋಯಿಸರು, ಅದೇನನ್ನೋ ಹೇಳಬೇಕೆಂದು ಬಾಯ್ತೆರೆದು ಮತ್ತೆ ಸುಮ್ಮನಾದರು. 'ಕೊರತಿಗೆ ಮಗು ದಾನ ಮಾಡುವ ಶಾಸ್ತ್ರ'ಕ್ಕೆ ಪರ್ಯಾಯವಾದ ಇನ್ನೊಂದು ಶಾಸ್ತ್ರವನ್ನು ತಮ್ಮ 'ಜ್ಯೋತಿಶಾಸ್ತ್ರ ಬತ್ತಳಿಕೆ'ಯಿಂದ ಪ್ರಯೋಗ ಮಾಡಬಲ್ಲವರು ಈ ಜೋಯಿಸರು. ಆ ಪ್ರಯೋಗಕ್ಕಾಗೇ ಬಾಯ್ತೆರೆದವರು ತಟ್ಟನೆ ಎಂಥದ್ದೋ ಹೊಳೆದು ಮತ್ತೆ ತುಟಿ ಮುಚ್ಚಿಕೊಂಡರು.

'ಈ ಕೊರಗ ಪಡೆಗಳಿಗೆ ಏರಿರುವ ಹಂದಿ ಥರ್ಬಿ ಇಳಿಸಲು ಇಂವು ಗುತ್ತಿನವೇ ಸಮ. ಇಂವ ಗುತ್ತಿನ ಧಣಿ ಹೇಗಾದರೂ ಮಾಡಿ ತನ್ನ ಮೊಮ್ಮಗುವಿನ ಶನಿಯನ್ನೊಮ್ಮೆ ದಾಟಿಸಲು ಆ ಕೊರತಿಯನ್ನು ಕರೆತರದಿರಲಾರ. ಒಳ್ಳೆಯದೋ.... ಕೆಟ್ಟದ್ದೋ ಒಮ್ಮೆ ಆ ಶಾಸ್ತ್ರಕ್ಕೆ ಜೀವ ಬಂದರೆ ಸಾಕು. ಹಾಗೇ ಬಿಟ್ಟರೆ ಆ ಸಂಪ್ರದಾಯವಲ್ಲೇ ನೆಲಕಚ್ಚಿ ಹೋಗುತ್ತೆ.....' ಎಂದು ಯೋಚಿಸಿಯೆ ಜೋಯಿಸರು ತುಟಿ ಬಿಚ್ಚದಿದ್ದುದು.

ಹಿಂದೆಲ್ಲಾ ಜೋಯಿಸರೂ ನೇರವಾಗಿ ಆ ಕೊರಗರಿಗೆ ಕರೆ ಕಳುಹಿಸುವ ಪರಿಪಾಠವಿತ್ತು. ಯಾವಾಗ್ಗ ಕುಪ್ಪಪೂಜಾರಿ ಬಂದು ಆತನಿಗಾದ ಅವಮಾನವನ್ನು ಜೋಯಿಸರೆದುರು ಹೇಳಿ ಅತ್ತುಕೊಂಡನೋ.... ಅಲ್ಲಿಂದ ಜೋಯಿಸರಿಗೂ, ಕೊರಗರಿಗೂ ಸಂಬಂಧ ಕಡಿದೇ ಹೋಗಿತ್ತು.

ಆ ಕುಪ್ಪನಿಗಾದ ಅವಮಾನದ ಕತೆ ಜೋಯಿಸರಿಗೆ ಯಾವತ್ತೂ ನೆನಪಿನಾಳದಿಂದ ತೇಲುತ್ತಾ ಮೇಲೇರಿ ಬಂದು ಅವರ ಪಿತ್ತ ಕೆರಳಿಸುವುದುಂಟು. ಹಾಗೆಯೇ ಕುಪ್ಪ ಪೂಜಾರಿ ಅಂದು ಕೊರಗರ ಕೊಟ್ಟದತ್ತ ಮುಖ ಮಾಡಿ ಬೈದದ್ದು ಕೂಡಾ ಅವರಿಗೆ ನೆನಪಲ್ಲಿ ನೆನಪಾಗಿ ಹರಿದು ಬರುವುದಿದೆ. 'ನಮ್ಮನೆಯ ಎಂಜಲೆಲೆಗೆ ನಾಯಿ ಕಾಗೆಗಳಂತೆ ಅಲ್ಲಿ ಇಲ್ಲಿ ಬೇಲಿ ಹೊಲಗಳಲ್ಲಿ ಕಾಯುತ್ತಿದ್ದ ಈ ಹಡಬೆ ಬಿಕನಾಸಿಗಳಿಗೆ ಈಗ ಕಂಡೆ ತುಂಬಾ ಪಸೆ ಬಂದಿದೆ; ಆ ಹಲ್ಕಾ ಗೋರ್ಮೆಂಟಿನವ್ರು ಇವಕ್ಕೆ ತೋಟಿ ಕೆಲಸ ಕೊಟ್ಟಿದ್ದೇ ತಪ್ಪಾಯ್ತು' ಎಂದು ಪರಂಗಿರೋಗ ಹಿಡಿದ ನಾಯಿಯಂತೆ ಹಲುಬುತ್ತಾ ಆತ ಗೋಳಿಟ್ಟದನ್ನು ಜೋಯಿಸ್ರು ಎಂದಾದರೂ ಮರೆತಾರೆಯೇ.

ಕುಪ್ಪ ಪೂಜಾರಿಗೆ ಅಂದು ಆದದ್ದಾದರೂ ಏನು? ಆತನ ಸೊಸೆ ಬಸುರಿಯಂತೆ. ಸಂಪ್ರದಾಯದ ಪ್ರಕಾರ ಬಯಕೆಯ ದಿನ ಅಜಲಿನ ಕೊರತಿ ಬರಬೇಕು. ಆಕೆ ಬಸುರಿಯ ಉಗುರು ಅಥವಾ ಕೂದಲು ಬೆರಸಿರುವ ಎಂಜಲನ್ನವನ್ನು ತಿಂದು, ಆ ಬಸುರಿ ದಾನ ಎರೆವ ತೆಂಗಿನೆಣ್ಣೆಯನ್ನು ತನ್ನ ತಲೆ ಕೈಕಾಲಿಡೀ ಪೂಸಿಕೊಂಡು ಆ ಮೂಲಕ ತುಂಬು ಗರ್ಭಿಣಿಯ ಶನಿಯನ್ನು ತನ್ನ ದೇಹಕ್ಕೆ ಆವಾಹಿಸಿಕೊಳ್ಳಬೇಕು.

ಎಂದಿನಂತೆ ಸಹಜವಾಗಿ ಈ ಬಾರಿಯೂ ಕುಪ್ಪ ಪೂಜಾರಿ ತನ್ನ ಮಗ ಅಂಗರನ ಮೂಲಕ ಕೊರತಿಗೆ ಕರೆ ಕಳಿಸಿದ್ದ. ಅಂಗರ ಕಾಡಿನಲ್ಲಿನಲ್ಲಿರುವ ಕೊರಗರ ಕೊಟ್ಟಕ್ಕೆ (ಗುಡಿಸಲು) ಬರುವಷ್ಟರಲ್ಲಿ ಕೊರತಿ ಕುಡ್ಪು ಬುಟ್ಟಿಗೆ ಬೀಳು ತರಲು ಕಾಡಿಗೆ ಹೋಗಿದ್ದಳು. ಕೊರಗ ಲಾಂತುವೂ ಆಮೆ ಕುಟ್ಟಲು ಹೊಳೆ ಕಡೆ ಹೋಗಿದ್ದಿರಬೇಕು. ಕೊಟ್ಟದೊಳಗೆ ಮಗ ಕೇತುವೊಬ್ಬನೇ ಕುರ್ಚಿಯಲ್ಲಿ ಕುಳಿತು ಅದೇನೋ ಲೆಕ್ಕ ಬರೆಯುತ್ತಿದ್ದ.

'ಎಲಲ.....ಲಾ ಈ ಅಂದಗೇಡಿ ಕೊಟ್ಟಕ್ಕೊಂದು ಕುರ್ಚಿ ಬೇರೆ ಕೇಡು. ಕರಿಯ ಕಾಗೆರಸನಿಗೆ ಚಿನ್ನದ ಅಂಬಾರಿ....! ಇದೆಂಥಾ ಪೋಕಾಲದ ಲೆಕ್ಕವಪ್ಪ. ತನ್ನ ಸಾವಿರ ಮುಡಿ ಹುಟ್ಟುವಳಿ ಗದ್ದೆಗಳ ಲೆಕ್ಕವಿರಬೇಕು....' ಎಂದು ಮನದೊಳಗೆ ಹಲ್ಲು ಮಸೆಯುತ್ತಾ ಏನು ಎತ್ತ ಎಂದು ವಿಚಾರಿಸದೆ ಬಲು ದೂರದಲ್ಲೇ ನಿಂತು ಕೊರಗನ ಮಗ ಕೇತುವನ್ನು ಧ್ವನಿಯೇರಿಸಿ ಹೊರ ಕರೆದಿದ್ದ. ಯಾರದೋ ಧ್ವನಿ ಕೇಳಿ ಹಾಗೆ ಹೊರಬಂದು ನಿಂತ ಕೇತುವಿನಲ್ಲಿ 'ನಾಳೆ ಮನೆಯಲ್ಲಿ ಬಯಕೆ ಮಾರಾಯ; ಎಣ್ಣೆ ಹೊಯ್ಯುವ ಶಾಸ್ತ್ರಕ್ಕೆ ನಿಮ್ಮ ಕೊರತಿಯನ್ನು ಕಳುಹಿಸಕೊಡಬೇಕು' ಎಂದು ಕೇಳಿದ್ದಾನಷ್ಟೆ.

'ನಾನೇ ಬಂದರಾಗದೆ ಮಾರಾಯ...? ಬೇಕಾದರೆ ಜತೆಯಲ್ಲಿ ನಾಲ್ಕು ಖಾಕಿ ಪೋಲೀಸರನ್ನೂ ಕರೆತರುವ. ಕೊರತಿಗೆ ಹೊಯ್ಯುವ ಎಣ್ಣೆಯನ್ನು ಅವರಿಗೇ ಹೊಯ್ದು ಎಂಜಲನ್ನವನ್ನೂ ಅವರಿಗೇ ತಿನ್ನಿಸಿ ಬಿಡುವ.... ಆಗದಾ?' ಎಂದು ಕಣ್ಣುಗಳನ್ನು ಗರ ಗರ ತಿರುಗಿಸುತ್ತಾ ಮಾತಿನ ಹರಿತ ಬಾಣ ಬಿಟ್ಟದ್ದಾನಷ್ಟೆ ಅಂಗರ ಕಾಡಿನಂಚಿನಿಂದ ಪದ್ರಾಡ್! ಅಲ್ಲಿಂದ ಉಸಿರುಗಟ್ಟಿ ಓಡಿ ಬಂದವ ನಿಂತದ್ದು ಜೋಯಿಸ್ರ ಅಡಿಕೆ ತೋಟದ ಅಂಚಲ್ಲಿ.

ಕೊರಗ ಕೇತುವೇನು ಈಗ ಸಾಮಾನ್ಯದವನಲ್ಲ. ಆತನ ಹಿಂದೆ ವಿದ್ಯೆ ಬುದ್ಧಿ ಕಲಿತ, ಸುತ್ತಲ ನಾಕೂರಿನ ಕೊರಗ, ಮನ್ಸ ಮುಂಡಾಲ, ಮೊಗೇರ ಮಕ್ಕಳ ದೊಡ್ಡ ಹಿಂಡೇ ಇದೆ. ಎಲ್ಲರೂ ಇತ್ತಿತ್ಲಾಗೆ ಒಗ್ಗಟ್ಟಾಗಿ ಅದೆಂತದ್ದೋ ಸಂಘ ಕಟ್ಟಿಕೊಟ್ಟಿದ್ದಾರಂತೆ. ಇದುವರೆಗೂ ತಮ್ಮನ್ನು ತುಳಿದು ಹಿಪ್ಪೆ ಮಾಡಿದ ಮೇಲ್ಜಾತಿಯವರೇನಾದರೂ ಈಗ ಬಾಯಿ ತೆರೆದರೆ ಸಾಕು, ಮರುದಿನವೆ ಪೋಲೀಸ್ ಟೊಪ್ಪಿಗಳು ಕೋಳ ಹಿಡಿದು ಅಂಗಳದಲ್ಲಿ ಹಾಜರು! ಒಂದೆರಡು ಬಾರಿ ಊರ ಸ್ಥಿತಿವಂತರಿಗೆ ಇದರ 'ರುಚಿ' ಸಿಕ್ಕಿದೆ ಕೂಡಾ.

ಕೊನೆಗೂ ಅಜಲಿನ ಕೊರತಿ, ಕುಪ್ಪನ ಸೊಸೆಯ ಬಯಕೆಯ ಸಂಭ್ರಮಕ್ಕೆ ಬರಲೇಇಲ್ಲ. ಬೇರೆ ಸೀಮೆಯಿಂದ ಕೊರತಿಯನ್ನು

ಕರೆತರುವ ಎಂದರೆ ಅದಕ್ಕೂ ಈ ಕೇತುವಿನ ಅಡ್ಡಗಾಲಿದೆ. ಅಂತೂ ಕೊರತಿ ಇಲ್ಲದೆಯೆ ಆ ಬಯಕೆ ನಡೆಯಿತು. ಸಿಟ್ಟು ಅವಮಾನದಿಂದ ಕುದಿದ ಕುಪ್ಪ ಜೋಯಿಸರ ಕಾಲಿಗಡ್ಡ ಬಿದ್ದು ತನ್ನ ಗೋಳಿನ ಕತೆ ಹೇಳಿಕೊಂಡು ಬಸುರಿಯ ಶನಿಗ್ರಹಚಾರ ಪರಿಹಾರಕ್ಕಾಗಿ ಒಂದು ನೂಲು ಮಂತ್ರಿಸಿಕೊಂಡಿದ್ದ. ಈ ಘಟನೆ ಕೇಳಿದ ನಂತರ ಜೋಯಿಸರಿಗೂ ಕೊರಗರನ್ನು ಕಂಡರೆ ಸಾಕು-ಅಡಿ ಅದುರತೊಡಗುತ್ತದೆ-ಭಯದಿಂದ.

ಇದೀಗ ಯೋಚನೆಯ ಬಲೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದ ಗುತ್ತಿನೊಡೆಯರಿಗೆ ಏನೊಂದು ಹೊಳೆಯದಂತಾಗಿ, ಜೋಯಿಸರಿಗೂ ಒಂದು ಮಾತು ಹೇಳದೆ ಮರಳಿ ಗುತ್ತಿನಂಗಳಕ್ಕೆ ನಡದಿದ್ದರು. ಮಡದಿ ಸೀತಕ್ಕೆಯ ಎದುರಿಗೆ ಇರುವ ಸಮಸ್ಯೆಯನ್ನಿಟ್ಟರೆ ಅದಕ್ಕೊಂದು ಸ್ಪಷ್ಟ ಪರಿಹಾರ ಸಿಗಬಹುದು ಎಂಬ ಆಸೆಯಿಂದ ಚಾವಡಿಯೇರಿದವರೇ ಮಡದಿಗಾಗಿ ಕಣ್ಣಾಡಿಸಿದರು.

ಮಗುವಿಗೆ ಚಿನ್ನರೋಗ ಇದ್ದರೂ ಇರಬಹುದು ಎಂಬ ಗುಮಾನಿಯಿಂದ ಸೀತಕ್ಕೆಯವರು ಎಲ್ಲಿಂದಲೋ ಒಂದಷ್ಟು ಮದ್ದಿನೆಲೆ ಹುಡುಕಿ ತಂದು ರಸ ತೆಗೆಯುವುದರಲ್ಲಿ ನಿರತರಾಗಿದ್ದರು. ಈ ರಸದಲ್ಲಿ ಅರಿಭಟ್ರ ಚಿನ್ನೆಯ ಯಾತ್ರೆಯನ್ನು ಅರೆದು ಕೊಟ್ಟರೆ ಬಹಳ ಒಳ್ಳೆಯದಂತೆ. ಗುತ್ತಿನೊಡೆಯರು ಇದೀಗ ಮನದ ಭಾರವನ್ನು ಇಳಿಸಿಕೊಳ್ಳಲು ಗುತ್ತಿನೊಡತಿಯನ್ನು ಒಳಚಾವಡಿಗೆ ಕರೆದರು.

ಜೋಯಿಸರಿಂದ ಜಾತಕದ ಸಂಗತಿಗಳನ್ನು, ಅದಕ್ಕವರೇ ನೀಡಿರುವ ಪರಿಹಾರ ವಿಧಿಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೆಂಡತಿಯ ಎದುರಿಗಿಟ್ಟರು. ಸೀತಕ್ಕೆಗೂ ಇದು ನುಂಗಲಾಗದ ತುತ್ತಂತೆ ಪರಿಣಮಿಸಿತು. ಈ ಕಾಲದಲ್ಲಿ ಎಂತಹ ರೋಗಗಳನ್ನಾದರೂ ಗುಣಪಡಿಸುವಂತಹ ವೈದ್ಯರಿದ್ದಾರೆ ಎಂಬ ಸತ್ಯ ಅವರಿಗೆ ತಿಳಿದಿದೆ. ಆದರೆ ಇದರ ಜೊತೆಗೇ ತಲೆ ತಲೆಮಾರುಗಳಿಂದ ನಡೆದುಕೊಂಡ ಶಾಸ್ತ್ರ ಸಂಪ್ರದಾಯಗಳಲ್ಲಿ ಅವರಿಗೆ ವಿಪರೀತ ನಂಬಿಕೆಯೂ ಇದೆ. ಶಾಸ್ತ್ರಕ್ಕೆ ಕೊರತಿ ಬರದಿದ್ದರೇನು ಗತಿ.....? ಎಂಬ ಚಿಂತೆ ಅವರೆದೆಯಲ್ಲೂ ಹೂತು ಹೋಯ್ತು.

ತಮ್ಮ ಗುತ್ತಿನ ಸುತ್ತ ಹಿಂದೆಲ್ಲಾ ಗ್ರಹಗಳಂತೆ ಸುತ್ತುತ್ತಿದ್ದ ಅಜಲಿನ ಕೊರಗರು ಇತ್ತೀಚೆಗೆ ಈಚೆ ತಲೆಹಾಕದಿರುವುದು ಸೀತಕ್ಕೆಯವರ ಗಮನಕ್ಕೂ ಬಂದಿದೆ. ಹಳೆಯ ತಲೆಗಳು ಅಜಲು ಪದ್ಧತಿಗೆ ತಗ್ಗಿ ಬಗ್ಗಿ ಒಗ್ಗಿ ಹೋಗಿದ್ದರೂ, ಎಳೆಯ ತಲೆಗಳು ಅದಕ್ಕೊಲಿಯದೆ ಸ್ಪಷ್ಟವಾಗಿ ನಿರಾಕರಿಸುತ್ತಿರುವ ಸುದ್ದಿ ಗುತ್ತಿನೊಡತಿಯ ಕಿವಿಬೀಳಿಗೂ ತಲಪಿದೆ.

ಇದೀಗ ತಮ್ಮ ಗುತ್ತಿನ ಕುಡಿಯ ಶನಿದೋಷ ಕಳೆಯಲೆಂದು ಕೊರತಿಗೇನಾದರೂ ಹೇಳಿ ಕಳುಹಿಸಿ, ಆಕೆ ಏನಾದರೂ ಬರಲೊಪ್ಪದಿದ್ದರೆ ಅದಕ್ಕಿಂತ ಹೆಚ್ಚಿನ ಅವಮಾನ ಬೇರೆ ಯಾವುದಿದೆ? ಬಾಕ್ಯಾರು ಗುತ್ತಿಗೆ ಇದಕ್ಕಿಂತ ದೊಡ್ಡ ಅವಮಾನ ಬೇಕೆ? ಗುತ್ತಿನೊಡತಿಯ ಗಂಟಲಿಗೆ ಗಾಳ ಬಿದ್ದಂತಾಯಿತು. ಮಾತಿಲ್ಲದೆ ಚಿಂತೆಯಲ್ಲಿ ಮುಳುಗಿದರು.

ಆದರೆ ಆ ಹೊತ್ತಿಗಾಗಲೆ ಗುತ್ತಿನ ಧಣಿಗಳು ಒಂದು ಸ್ಪಷ್ಟ ನಿರ್ಧಾರಕ್ಕೆ ಬಂದಾಗಿತ್ತು. ಕೊರಗರಿಂದ ಅವಮಾನವಾದರೆ ಅವಮಾನ, ಮೊಮ್ಮಗನ ಆಯುಷ್ಯಕ್ಕಿಂತಲೂ ಮಹಾ ದೊಡ್ಡದೇನು ಅದು! ಒಕ್ಕಲಿನ ಆಳು ಕಾಂತುವನ್ನು ಕರೆದು ಕಾಡಿನಂಚಿಗೆ 'ಓಲೆ' ಅಟ್ಟಿದ್ದರು. ಹಾಗೆ ಹೋದ 'ಓಲೆ' ಅದೇ ವೇಗದಲ್ಲಿ ಮರಳಿ ಬಂತು. ಕೊರತಿ-ಕೊರಗನ ಬದಲು ಮಗ ಕೇತುವೇ ಗುತ್ತಿನ ಒಡೆಯರಿಗೆ ಸ್ಪಷ್ಟ ಉತ್ತರ ಕಳುಹಿಸಿದ್ದ. ಅಸ್ಪೃಶ್ಯತಾ ನಿವಾರಣಾ ಕಾಯ್ದೆಯಡಿ ದಲಿತ ದೌರ್ಜನ್ಯದ ಕೇಸು ಹಾಕಿ ಗುತ್ತಿನ ಧಣಿಗಳನ್ನು ವರ್ಷಗಟ್ಟಲೆ ಕೊಳೆಸಬಲೆ ಎಂಬುದೇ ಆ ಒಲೆಯ ಸಾರ. ಸಿಟ್ಟಿನಿಂದ ಅದುರಬೇಕಾದ ಶೆಟ್ಟರು ಅವಮಾನದಿಂದ ಕುಸಿದು ಹೋದರು. ಗಂಡನ ಸ್ಥಿತಿ ನೋಡಲಾಗದೆ ಸ್ವತಹ ಸೀತಕ್ಕೆಯೆ ಗುತ್ತಿನೊಡೆಯರಿಗೆ ಸಮಾಧಾನ ಹೇಳಿದ್ದರು.

ಗುತ್ತಿನೊಡತಿಗೆ ಭೂಮಿತಾಯಿಯಂತಹ ಸಹನೆ. ಕೊರಗ ಮಗನಂದ ಮಾತನ್ನು ಒಡಲಲ್ಲಿ ಒಪ್ಪವಾಗಿಟ್ಟುಕೊಂಡು ಸಹಿಸಿಕೊಂಡರು. ಪ್ರೀತಿಗೆ ಎಲ್ಲವನ್ನೂ ಮಣಿಸುವ ಶಕ್ತಿಯಿದೆ ಎಂಬುದನ್ನು ಗುತ್ತಿನ ಶೆಡ್ತಿ ಸೀತಕ್ಕೆಯವರು ಹಿಂದಿನಿಂದಲೂ ನಂಬಿಕೊಂಡು ಬಂದಿರುವ ಸತ್ಯ. ಅದರ ಸತ್ವ ಪರೀಕ್ಷೆಗೆ ಕೈ ಹಾಕುವ ನಿರ್ಧಾರಕ್ಕೆ ಆಕೆ ಬಂದು ಬಿಟ್ಟರು. ತಾವೇ ಖುದ್ದಾಗಿ ಕೊರಗರ ಕೊಟ್ಟಕ್ಕೆ ಹೋಗಿ ಕೊರತಿಯನ್ನು ಕಂಡು ಬರಲು ತೀರ್ಮಾನಿಸಿದರು.

ಮರುದಿನ ಮುಂಜಾನೆ ಎದ್ದು ಮಗುವನ್ನು ಮೀಯಿಸಿದವರೇ ಕೆಲಸದಾಕೆ ಚೆನ್ನಮ್ಮನನ್ನು ಕರೆದು 'ಬಾರೇ ಗುಡ್ಡಕ್ಕೋಗಿ ಒಂದಿಷ್ಟು ಮದ್ದಿನ ಕುಡಿಎಲೆ ತರುವ' ಎಂದು ಹೇಳುತ್ತಲೇ ಆಕೆಯೊಂದಿಗೆ ಪೂರ್ವಾಭಿಮುಖವಾಗಿ ಕಾಡಿನಂಚಿನತ್ತ ನಡೆದರು.

ಗುತ್ತಿನೊಡತಿ ನೇರ ನಡೆದದ್ದು ಕಾಡಿನ ಕೊರಗರ ಕೊಟ್ಟದತ್ತ. ಚೆನ್ನಮ್ಮನಿಗೆ ಮೈಯಿಡೀ ತಕ್ಲೀಪು, ಜತೆಗೆ ಅಚ್ಚರಿ ಕೂಡ. ಜಾತಿ ನಾಗರ ಎರೆಹುಳದ ಬಾಗಿಲಿಗೆ ಹೋಗುವುದೆಂದರೆ!

ನೂರು ಮುಡಿ ಹುಟ್ಟುವಳಿಯುಳ್ಳ ಬಾಕ್ಯಾರು ಗುತ್ತಿನ ಒಡತಿಯವರು, ಕೊರತಿ ಕುಡ್ಪುವಿನ ಕೊಟ್ಟದೆದುರು ಬಂದಾಗ ಸೂರ್ಯದೇವರು ಕಂತುವ ತವಕದಲ್ಲಿದ್ದರು. ಕೊಟ್ಟದಲ್ಲಿ ಹಿಂದಿನಂತೆ ಗಜಿಬಿಜಿಯಿಲ್ಲ, ಮೌನದಲ್ಲಿ ಮೌನ ಹನಿಯುತ್ತಿತ್ತು. ಕೊರಗ-ಕೊರತಿಯರಿಬ್ಬರೂ ಕೊಟ್ಟದ ಬಾಗಿಲಲ್ಲಿ ಕಾಲು ನೀಡಿ ಕೂತು ಬೀಳಿನಬುಟ್ಟಿ ಹೆಣೆಯುತ್ತಿದ್ದರು. ಇದೀಗ ಗುತ್ತಿನೊಡತಿಯ ಕರೆ ಕೇಳಿಸುತ್ತಲೇ ಇಬ್ಬರೂ ಗಡಬಡಿಸಿ ಎದ್ದು ಬಂದು ಮಾರು ದೂರದಲ್ಲೇ ಅಡ್ಡಬಿದ್ದರು. ಅದು ಅಭ್ಯಾಸಬಲದಿಂದಲೋ ಅಥವಾ ಎಂದಿನ ಪ್ರೀತಿ-ಗೌರವದ

ನೆಳವಿನಿಂದಲೋ.... ಎಂಬುದು ಒಂದೂ ತಿಳಿಯಲಿಲ್ಲ ಸೀತಕ್ಕೆಯವರಿಗೆ. ಸಮಾಜದಲ್ಲಿ ನೀಚ ಕುಲವಾದರೂ ಆ ಸುಸಂಸ್ಕೃತ ಮನಸ್ಸುಗಳಿಗೆ ಗುತ್ತಿನ ಶೆಡ್ತಿ ತಲೆಬಾಗುವಂತಾಯಿತು. ಅವರವರ ಜಾತಿ, ನೀತಿ, ಸಂಸ್ಕೃತಿ, ಸಂಪತ್ತುಗಳಿಗೆ ತಕ್ಕಂತಹ ನಡವಳಿಕೆ ಇರುತ್ತದೆ ಎಂದು ಬಲ್ಲವರು ಹೇಳಿದ್ದ ಮಾತು ಸುಳ್ಳು ಎಂದನಿಸಿತ್ತು-ಗುತ್ತಿನೊಡತಿಗೆ.

ಕೊರಗ-ಕೊರತಿಯರಿಬ್ಬರು, ಇಂದಿಗೂ ಈ ತಮ್ಮ ಒಡತಿಯ ಮೇಲೆ ತಮಗಿರುವ ಅಪಾರವಾದ ಪ್ರೀತಿ-ಗೌರವ, ಕೃತಜ್ಞತಾಭಾವ-ಭಾರವನ್ನು ಅಡ್ಡಬಿದ್ದು ವ್ಯಕ್ತಪಡಿಸಿ ಉಮ್ಮಳಿಸಿ ಬರುವ ಅಪರಾಧಿ ಪ್ರಜ್ಞೆಯಿಂದಾಗಿ ಆಕೆಯೆದುರು ತಲೆತಗ್ಗಿಸಿ ನಿಂತುಬಿಟ್ಟಿದ್ದರು. ಅವರಿಬ್ಬರ ಪುಣ್ಯವೋ ಏನೋ ಮಗ ಕೇತು ಕೊಟ್ಟದೊಳಗಿಲ್ಲ. ಇದ್ದಿದ್ದರೆ 'ನಾವು ನೀಚ ಕುಲದವರು, ಜಾತಿಹೀನರು.... ಪ್ರಾಣಿಜಾತಿಗೆ ಹತ್ತಿರವೆಂದು ಅವರಿಗೆ ಅಡ್ಡ ಬಿದ್ದು ತಲೆ ತಗ್ಗಿಸಿದ್ದಾ' ಎಂದು ಅಬ್ಬರಿಸಿ ಕೇಳಿದರೂ ಕೇಳುವವನೆ.

'ಮರದಡಿಯ ಸಸಿಗೆ ಮಳೆಯೇಟು ತಪ್ಪಲಿಕ್ಕಿಲ್ಲವಂತೆ. ಹಾಗೇ ನಮ್ಮ ಸ್ಥಿತಿ ಕೂಡಾ. ಒಮ್ಮೆ ಮೇಲ್ಜಾತಿಯವರ ಕೈ ಕೆಳಗೆ ಬಿದ್ದರೆ ಸಾಕು.... ಏಟಿನ ಮೇಲೆ ಏಟು ನಿರಂತರ' ಎಂಬುದು ಮಗ ಕೇತುವಿನ ವಾದ.

ಆತನಿಗೆ ಏನು ಗೊತ್ತು! ಒಂದು ಕಾಲದಲ್ಲಿ ಈ ಬಾಕ್ಯಾರು ಗುತ್ತಿನ ಒಡತಿ ಇದೇ ಕೊರಗನ ಕುಟುಂಬಕ್ಕೆ ಮಾಡಿದಂತಹ ಉಪಕಾರ! ಅದು ಹೇಳಿ ಕೊಳ್ಳುವಂತಹದ್ದೇ? ಕೊರತಿಗೆ ವರ್ಷಕ್ಕೊಂದು ಬಸಿರು. ಆದರೆ ಹುಟ್ಟಿದ್ದೆಲ್ಲ ಮುಕ್ಕಾಲುವಾಸಿ ದೇವರ ಕಾಲಡಿಗೇ ಸಮ. ಕೊರತಿ ಗರ್ಭ ಹೊತ್ತಾಗ್ಲೆಲ್ಲ ಇದೇ ಕೊರಗ ಎಂಜಲ ಬುಟ್ಟಿ ಹೊತ್ತು ಬಂದವ ಗುತ್ತಿನ ಓರೆ-ಕೊರೆಯಲ್ಲಿ ನಿಂತು, ಒಡತಿಯತ್ತ ದೈನ್ಯಭಾವ ಬೀರಿದರೆ ಸಾಕು-ಗುತ್ತಿನೊಡತಿ ತನ್ನ ಒಡೆಯನ ಕಣ್ತಪ್ಪಿಸಿ ಕೊರಗನ ಆ ಬುಟ್ಟಿಗೆ ಅದೆಷ್ಟು ಬಾರಿ ಭತ್ತ-ದವಸಧಾನ್ಯ ಸುರಿದು ಕಳುಹಿಸಿಲ್ಲ. ಬಸುರಿಯ ಬಯಕೆಯ ನಾಲಿಗೆಗೆಂದು ಉಪ್ಪಿನಕಾಯಿ-ಬೇಯಿಸಿದ ಮಾವಿನಕಾಯಿ ಕಳುಹಿಸಿ ಕೊಟ್ಟದ್ದೂ ಇದೆ.

ಅಷ್ಟೇಕೆ ಇದೇ ಕೊರತಿ ಕೇತುವಿನ ಬಸುರಿಯಿದ್ದ ಕಾಲ. ಗುತ್ತಿನ ಒಡತಿ ಸೀತಕ್ಕೆಯವರು ಕೂಡಾ ಆಗ ತಾನೇ ತಮ್ಮ ಬಾಣಂತನ ಮುಗಿಸಿ ಎದ್ದಿದ್ದಾರಷ್ಟೆ. ಗುತ್ತಿನ ಮನೆಯಲ್ಲೇನು ಬಾಣಂತಿ ಲೇಹ್ಯ ಕಷಾಯಗಳಿಗೆ ಬರವೇ? ಆಮೆ ಕುಟ್ಟಲು ಲಾಂತು ಕೊರಗನ ಜತೆ ಬರುವ ತುಂಬು ಬಸುರಿ ಕೊರತಿಯನ್ನು ಗುತ್ತಿನೊಡತಿ ಕಂಡವರೇ, ಗರಟೆ ತುಂಬಾ ಮೆಂತೆ-ಬೆಳ್ಳುಳ್ಳಿ ಲೇಹ್ಯಗಳನ್ನು ಕೊಟ್ಟು 'ಜಾಗ್ರತೆ ತೆಗೆದಿಡು ಕೊರತಿ...., ನಿನ್ನ ಬಾಣಂತನದ ಕಾಲಕ್ಕೆ ಬರುತ್ತೆ' ಎಂದು ಹೇಳಿ ಕೊಟ್ಟಿದ್ದನ್ನು ಈ ಕೊರತಿ ಜೀವಮಾನದಲ್ಲಿ ಮರೆಯುವುದುಂಟೇ?

ಈಗಲೂ ಕೊರಗ ಕೊರತಿಯರಿಬ್ಬರಿಗೂ ಬಾಕ್ಯಾರುಗುತ್ತಿನ ಮೇಲಿರುವ ಮೋಹ ಅಷ್ಟಿಷ್ಟಲ್ಲ. 'ಎಲ್ಲಾ ಮೇಲ್ಜಾತಿಯವರು ಒಂಥರಾ ಗರಗಸದಂತೆ. ಸಿಗಿಯುವುದೊಂದೇ ಅವರ ಕೆಲಸ' ಎಂದು ಕೇತು ಹೇಳುವಾಗಲೆಲ್ಲ ಇವರಿಬ್ಬರೂ ಬಾಕ್ಯಾರು ಗುತ್ತನ್ನು ವಹಿಸಿ ಅದೆಷ್ಟು ಬಾರಿ ಪ್ರತಿಭಟಿಸಿಲ್ಲ? ''ಎಲ್ಲವನ್ನೂ ಒಂದೇ ತ್ರಾಸಲ್ಲಿ ತೂಗಬಾರದು ಮಗ....; ಕಬ್ಬಿಣ ತೂಗುವುದರಲ್ಲಿ ಚಿನ್ನ ತೂಗುವುದಿದೆಯೆ'' ಎಂದು ಮಗನಿಗೆ ಹಲವು ಬಾರಿ ಬುದ್ಧಿ ಹೇಳಿದ್ದಿದೆ. ಆದರೇನು ಹಳೆಯ ತಲೆಗಳಿಂದ ಹೊರಡುವ ದನಿಗಳನ್ನು ಎಳೆಯ ತಲೆಗಳು ಕೇಳಬೇಕಲ್ಲ... ಗೌರವಿಸಬೇಕಲ್ಲ!

ಊರ ಜಾತಿಮಂದಿ ಕೋಲ-ಕಂಬಳವೆಂದು ಡೋಲಿನ ಕೆಲಸದ ನೆಪಹೊತ್ತು ತಮ್ಮ ಕೊಟ್ಟದತ್ತ ಬಂದಾಗಲೆಲ್ಲ, ಈ ಮಗರಾಯ ಬೀಸಿ ಒಗೆಯುವ ನಿಷ್ಠುರದ ಮಾತಿಗೆ ಕೊರಗ ಕೊರತಿಯರಿಬ್ಬರೂ ಅದೆಷ್ಟು ಬಾರಿ ದುಃಖ ಪಟ್ಟಿಲ್ಲ. 'ಅವರಿಂದಲೇ ಬೇಡಿ ತಿಂದ ಕೈಗಳಿವು, ಅವರನ್ನೆ ಇದೇ ಕೈಗಳಿಂದ ದೂಡುವುದು ಸರಿಯೇ?' ಎಂಬುದು ಹಳೆ ಜೀವಗಳ ಅಳಲುವಾದ.

ಡೋಲು ಬಾರಿಸುವುದು ನಮ್ಮ ಕುಲಕಸುಬು, ಹಳೆಯ ಕಾಲದಿಂದ ಬಂದಿರುವಂತದ್ದು, ಜಾತ್ರೆ, ಕೋಲ, ಕಂಬಳ, ಸಾವು-ಬೊಜ್ಜಗಳಿಗೆ ಬೇರೆ ಜಾತಿಯವರು ವಾದ್ಯ ಕೊಂಬು ಬಾರಿಸುವಂತೆ ನಾವೂ ಡೋಲು-ಕೊಳಲು ಬಾರಿಸಿ ಅದಕ್ಕೆ ಪ್ರತೀಯಾಗಿ ಪಡಿ ಪಡೆದರೆ ಅದರಲ್ಲೇನೂ ತಪ್ಪು-ಎಂದು ಹಲವು ಬಾರಿ ಹಿರಿಕೊರಗ, ಎಳೆಕೊರಗನಲ್ಲಿ ವಾದಿಸಿದ್ದಿದೆ. ಅವನ ವಾದ ವಾದವಷ್ಟೆ ಮಗನ ವಾದದೆದುರು ಅವೆಲ್ಲವೂ ಗಾಳಿಪಾಲು. ಅವ ದುಡಿದು ತರುವವ. ಅದೂ ಮರ್ಯಾದೆ ತರುವ ಗವರ್ಮೆಂಟ್ ಕೆಲಸ. ಮನೆಯಲ್ಲಿ ಅವ ಹೇಳಿದ್ದು.... ಅವ ಬಿಟ್ಟಿದ್ದು, ಬೇರೆಯವರಿಗೆ ಉಸಿರಿಲ್ಲ. ಹೆತ್ತವರು ಉಸಿರಾಡುವ ಮರದ ದಿಮ್ಮಿಗಳಷ್ಟೆ.

ಆದರೂ ನಿನ್ನೆ ಗುತ್ತಿನ ಮನೆಯಿಂದ 'ಮಗು ಬದಲಾಯಿಸುವ ಶಾಸ್ತ್ರ'ಕ್ಕೆ ಕರೆ ಬಂದಾಗ, ಮಗ ಕೊಟ್ಟು ಕಳುಹಿಸಿದ್ದ ಪ್ರತ್ಯುತ್ತರ ಕೊರಗ-ಕೊರತಿಯರಿಬ್ಬರನ್ನೂ ತೀರಾ ಕುಪಿತಗೊಳಿಸಿತ್ತು. ಹಿರಿಕೊರಗ ತನ್ನೊಳಗೆ ಏರಿ ಬರುವ ಭಾವನೆಯನ್ನು ಅದುಮಿಡಲಾಗದೆ ಸಂಯಮ ವಹಿಸಿಯೇ ಮಗನಿಗಂದಿದ್ದ.

'ಹಳೆಯ ಕಾಲದಿಂದಲೂ ಕಟ್ಟಿಕೊಂಡು ಬಂದಿರುವ ಕಟ್ಟನ್ನು (ಪದ್ಧತಿ) ಹಾಗೇ ಬಿಟ್ಟುಬಿಡಲಿಕ್ಕಾಗುತ್ತಾ ಮಗ....; ನಮ್ಮ ಜೀವನ ಇರುವ ವರೆಗೆ ಇದು, ನಂತರ ನಿಮಗೆ ಇಷ್ಟ ಬಂದ ಹಾಗೆ ಮಾಡಿ...;

ಅಪ್ಪನ ಮಾತು ಕೇಳಿ ಕೇತುವಿಗೆ ಆತನನ್ನು ಹೊಡೆದು ಸಾಯಿಸುವಂತಹ ಕೋಪವುಕ್ಕಿ ಬಂದು. 'ನೀನು ತಾಯ ಹೊಟ್ಟೆಯಿಂದ ಉದುರುವಾಗಲೆ ಆ ಕಟ್ಟುಗಳನ್ನೆಲ್ಲ ಕಟ್ಟಿಕೊಂಡು ಬಂದಿದ್ದೇನು? ಆ ಕಟ್ಟುಗಳನ್ನು ಮಾಡಿದವರಾರು? ಆ ಮೇಲ್ಜಾತಿಯವರು. ಅವ್ರು ಇಷ್ಟು ದಿನ ನಮ್ಮನ್ನು

ನರಿನಾಯಿಗಳಂತೆ ನಡೆಸಿಕೊಂಡು ಬಂದಿದ್ದು ಸಾಕು...., ಇನ್ನೂ ನಾವು ನಾಯಿಗಳಂತೆ ಬದುಕು ನಡೆಸಬೇಕಾ?'

'ಅಲ್ಲಪ್ಪ....ಯಾತಕ್ಕಾಗಿ ನಾವು ಅವರ ಶನಿಯನ್ನು ನುಂಗಬೇಕು. ವರ್ಷಾನುಗಟ್ಟಲೆಯಿಂದ ನಾವವರ ಎಂಜಲು ನುಂಗಿದ್ದೂ ಸಾಕು, ಆ ಅಜಲು ಪದ್ಧತಿಯ ಶಾಪವೂ ಸಾಕು...' ಮಗನ ಪಾಯಿಂಟಿನ ಮಾತನ್ನು ಮುಂದೆ ಕೇಳಲಾಗದೆ ಕೊರಗ ಎದ್ದು ಗಾಳ ಹಿಡಿದು ಹೊಳೆಯತ್ತ ನಡೆದಿದ್ದ.

ಇದೀಗ ಗುತ್ತಿನೊಡತಿ ಬಂದವರು ಮಗುವಿನ ವಿಚಾರವನ್ನೆತ್ತಲು ಬಾಯ್ತೆರೆಯುವಷ್ಟರಲ್ಲಿ ಕೊರತಿ ಅವರ ಮಾತಿಗಡ್ಡ ಬಂದಿದ್ದಳು. '....ನಮ್ಮ ದೆತ್ತಿಯ (ಒಡತಿಯ) ಕೊಡುವ ಕೈಗಳಿಂದಾಗಿಯೆ ನಾವಂದು ಬದುಕು ನಡೆಸಿದ್ದಲ್ಲವೆ! ನಿಮ್ಮ ವಂಶದ ಕುಡಿ ಮುರುಟುವುದಕ್ಕೆ ನಾವು ಬಿಡುವುದುಂಟಾ? ನಾಳೆ ಅಮಾಸೆಯಲ್ಲವಾ ದೆತ್ತಿ...., ರಾವು ಕೇತು ಅಡ್ಡ ಬಂದರೂ ಸರಿಯೆ, ನಾಳೆ ಬೆಳಿಗ್ಗೆ 'ಬಾಲೆದ ಬರಿ ಪುಗಪುನ' (ಮಗುವಿನ ಗೋತ್ರ ಬದಲಿಸುವ) ಶಾಸ್ತ್ರಕ್ಕೆ ನಾನು ಬರದಿದ್ದರೆ ನನ್ನ ಮಕ್ಕಳನ್ನು ಕೊಂದು ತಿಂದೇಂತ ತಿಳಿಯಿರಿ' ಎಂದು ತನ್ನ ಮಕ್ಕಳ ಮೇಲೆ ಆಣೆಯಿಟ್ಟು ಒಡತಿಯನ್ನು ನಂಬಿಸಿ ಕಳುಹಿಸಿಕೊಟ್ಟಳು. ಒಡತಿಗೆ ಕೊರತಿಯ ಔದಾರ್ಯದ ಮಾತುಗಳೆದುರು ತುಟಿ ಬಿಚ್ಚಲಾಗಲಿಲ್ಲ. ಮೌನವೇ ದಾರಿಯುದ್ದಕ್ಕೂ ಜೊತೆಯಾಯ್ತು.

ಮರುದಿನ ಅಮಾವಾಸ್ಯೆ. ಗುತ್ತಿನೊಡೆಯರು ಮುಂಜಾನೆಯಿಂದಲೆ ಮೌನಮುದ್ರೆ ಧರಿಸಿದ್ದಾರೆ. ಅವರಿಂದ ಏನನ್ನೂ ನಂಬಲಾಗುತ್ತಿಲ್ಲ. ಕೊರತಿ ಬರಲೊಪ್ಪಿದ ಸುದ್ದಿ ನಿನ್ನೆ ಮಡದಿ ಬಾಯಿಂದ ಕೇಳಿಯೇ ಅವರಿಗೆ ಒಂದು ಕ್ಷಣ ಗರ ಬಡಿದಂತಾಗಿತ್ತು. ನಿಜವೊ.... ಸುಳ್ಳೋ....! ಕೊರತಿಯ ಹಿಂದುಗಡೆಯಿಂದ ಪೊಲೀಸ್ ಕೋಳ ಬಂದರೂ ಬರಬಹುದು. ಶೆಟ್ಟರು 'ಹಾSSSSS' ಎಂದು ನಿಟ್ಟುಸಿರು ಬಿಟ್ಟರು-ತುಸು ದೀರ್ಘವಾಗಿಯೇ.

ಒಳಗಡೆ ಅಡುಗೆಮನೆಯಲ್ಲಿ ಕೊರತಿಗೆ ಬಡಿಸುವ ಅಡುಗೆಯ ತಯಾರಿಯಲ್ಲಿ ನಿರತರಾಗಿದ್ದ ಗುತ್ತಿನೊಡತಿಗೆ ಈ ದೀರ್ಘ ನಿಟ್ಟುಸಿರ ಅಲೆ ತಲಪದಿರಲಿಲ್ಲ. ಒಮ್ಮೆ ಬಂದು ವಿಚಾರಿಸುವ ಎಂದರೆ ಕೈಯಲ್ಲಿ ಅಡುಗೆ ಕೆಲಸ! ಕೊರತಿಗೆ ಬಡಿಸಲು ಬೂದುಗುಂಬಳದ ಸಾರು, ಸೇರಕ್ಕಿ ಅನ್ನ ಸಿದ್ಧವಾಗಿದೆ. ಇನ್ನುಳಿದದ್ದು ಬಾಳೆಕಾಯಿ ಪಲ್ಯ ಮಾತ್ರ.

ಕೊರತಿಗೆ ಮಗು ದಾನ ಮಾಡುವ ಶಾಸ್ತ್ರದ ಅನ್ನದಾನಕ್ಕಾಗಿ ಬಾಳೆಕಾಯಿ ಪಲ್ಯ, ಬೂದುಗುಂಬಳದ ಸಾರು ಅಗತ್ಯವಾಗಿ ಬೇಕೇ ಬೇಕಲ್ಲವೆ. ಇವೆಲ್ಲ ತಯಾರಾಗುವಷ್ಟರಲ್ಲಿ ಹೊರ ಅಂಗಳದಿಂದ ಸುದ್ದಿ ಬಂತು-ಕೊರತಿ ಬಂದು ಬುಗುರಿ ಮರದಡಿ ಕುಳಿತಿದ್ದಾಳೆ-ಎಂದು. ಗುತ್ತಿನೊಡತಿಗೆ ಸುದ್ದಿ ಕೇಳಿ ಕೃತಜ್ಞತೆಯಿಂದ ಕಣ್ಣೀರು ಹರಿದೇ ಬಂತು.

ಅತ್ತ ಕೊರತಿ ಬಂದೊಡನೆ ಇತ್ತ ಗುತ್ತಿನೊಡೆಯರ ಮನಸ್ಸು ವಿಕ್ಷುಬ್ಧಗೊಳ್ಳತೊಡಗಿತ್ತು. ಎಲ್ಲಿ ಕೊರತಿಯ ಮಗ ಕೇತು ತನ್ನನ್ನು ಸಂಕಷ್ಟಕ್ಕೆ ಗುರಿಪಡಿಸಲಿದ್ದಾನೋ ಎಂಬ ಭಯ ಅಮರತೊಡಗಿದಂತಾಗಿ ಕೂತಲ್ಲಿ ಕೊರಲಾಗದೆ ಅತ್ತಿತ್ತ ಅಡ್ಡಾಡತೊಡಗಿದರು. ಶಾಸ್ತ್ರವನ್ನೊಮ್ಮೆ ಬೇಗ ಮುಗಿಸಿ, ಕೊರತಿಯನ್ನತ್ತ ಸಾಗ ಹಾಕುವ ಎಂದು ಅಡುಗೆ ಕೋಣೆಯಲ್ಲಿದ್ದ ಮಡದಿಗೆ ಹೇಳುವ ಎಂದು ಒಳಬಂದರೆ, ಒಳಗೆ ಎಲ್ಲವೂ ಸಿದ್ಧವಾಗಿತ್ತು. ಗೆರೆಸೆಗೆ 'ಬಡಿಸುವ' ಕ್ರಿಯೆ ಆರಂಭವಾಗಿತ್ತು.

ದೊಡ್ಡ ಗೆರಸೆಗೆ ಕುಡಿ ಬಾಳೆಲೆ ಹಾಕಿ, ಅದಕ್ಕೆ ಸೇರಕ್ಕಿ ಅನ್ನ ಬಡಿಸಿ, ಅದರ ಮೇಲೆ ಬೂದುಗುಂಬಳದ ಸಾರು, ಬಾಳೆಕಾಯಿ ಪಲ್ಯ ಸುರಿದು ಗುತ್ತಿನೊಡತಿ ಅದನ್ನೆತ್ತಿಕೊಂಡು ಕೊರತಿಯತ್ತ ನಡೆದರು. ಮನೆಯವರೆಲ್ಲರೂ ಗುತ್ತಿನ 'ಬೆಳಕಿನ ಹನಿ'ಯಾದ ಆ ಮಗುವಿನ ಸಮೇತ ಒಡತಿಯನ್ನು ಹಿಂಬಾಲಿಸಿದರು.

ಗೆರಸೆ ಹೊತ್ತ ಒಡತಿಗೆ ಕೊರತಿಯನ್ನು ಕೊಂಡೊಡನೆ ಒಮ್ಮಿಂದಮ್ಮೆಗೆ ಸಾಷ್ಟಾಂಗ ಅಡ್ಡ ಬೀಳಬೇಕೆಂಬ ಭಾವ ಉಕ್ಕಿ ಬಂತು. ಜಾತಿ ಯಾವುದಾದರೇನು- ನೀತಿ ಎಂದರೆ ಇದು ಎಂದು ಮನಸ್ಸಲ್ಲೇ ಅಂದು ಕೊಂಡರು. ಕುಕ್ಕರಗಾಲಲ್ಲಿ ಕುಳಿತು 'ಮಗುದಾನ' ಶಾಸ್ತ್ರವನ್ನು ಎದುರು ನೋಡುತಿದ್ದ ಕೊರತಿಯ ಮುಂದೆ ನಿಂತ ಒಡತಿ ಕೈಯಲ್ಲಿದ್ದ ಗೆರಸೆಯನ್ನು ಕೊರತಿಯ ತಲೆಯ ಮೇಲಕ್ಕೆ ಮೂರು ಬಾರಿ ಸುತ್ತಿಸಿ ಅದನ್ನು ಆಕೆಯ ಎದುರಿಗಿಟ್ಟು ಮಗಳ ಕೈಯಿಂದ ಮಗುವನ್ನೆತ್ತಿಕೊಂಡು ಕೊರತಿಯ ಮಡಿಲಿಗಿಟ್ಟರು. ತಕ್ಷಣವೇ ಕೊರತಿ ತನ್ನೆದುರಿಗಿದ್ದ ಗೆರಸೆಯನ್ನು ಎತ್ತಿಹಿಡಿದು ಮಗುವಿನ ಸುತ್ತ ಮೂರು ಬಾರಿ ನಿವಾಳಿಸಿ ಅದನ್ನು ಪಕ್ಕಕ್ಕಿಟ್ಟಳು. ಇದೀಗ 'ಅನ್ನದಾನವಾದೊಡನೆ ಗುತ್ತಿನೊಡತಿ ಪುಟ್ಟ ಕಂಚಿನ ಲೋಟದಲ್ಲಿದ್ದ ತೆಂಗಿನೆಣ್ಣೆಯನ್ನು ಕೊರತಿಯ ತಲೆಗೆ ಒಂದಷ್ಟು ಎರೆದು 'ಎಣ್ಣೆದಾನ'ದ ಶಾಸ್ತ್ರಕ್ಕೆ ಶುರುವಿಟ್ಟಾಗ ಒಂದರೆಕ್ಷಣ ಗಲಿಬಿಲಿಯಾದ ಕೊರತಿ ನಸುನಗುತ್ತಾ ತನ್ನ ತಲೆಯಿಂದ ಹರಿಯುತ್ತಿದ್ದ ಎಣ್ಣೆಯನ್ನಷ್ಟು ಅಂಗೈಯಲ್ಲಿ ಬಾಚಿ ಮಡಿಲಲ್ಲಿದ್ದ ಕಂದನ ತಲೆಗೆ ನೀವತೊಡಗಿದ್ದಳು. ಹಾಗೆಯೇ ಪಟ ಪಟ ಕಾಲೆತ್ತಿ... ಕಾ ಕೂ ಎಬ್ಬಿಸುತ್ತಿದ್ದ ಮಗುವನ್ನು ಎದೆಗಾನಿಸಿ ಅಪ್ಪಿ ಹಿಡಿದು ಮನಸಾರೆ ಮುದ್ದಾಡುತ್ತಾ 'ಇದು ನನ್ನ ಮಗು.... ಕುದುಪ....' ಎಂದು ಹೊಸ ನಾಮಕರಣ ಮಾಡುತ್ತಾ ತನ್ನ ಎದೆಹಾಲು ಕುಡಿಸುವವಳಂತೆ ಮೊಲೆತೊಟ್ಟನ್ನೆತ್ತಿ ಮಗುವಿನ ಬಾಯಿಗಿಟ್ಟಳು. ಮಗುವಿಗೆ ಸಾಂಕೇತಿಕವಾಗಿ ಹಾಲು ಕುಡಿಸುವ ಕ್ರಿಯೆಯದು. ಕೊರತಿಯ ಎದೆ ಬತ್ತಿ ಆಕೆಯ ಮಗ ಕೇತುವಿನಷ್ಟೇ ವರ್ಷವಾಗಿದೆ. ಇಳಿಬಿದ್ದು ಒಣಗಿಹೋದ ಆ ಎದೆತೊಟ್ಟನ್ನು ಇದೀಗ ಮಗು ಚೀಪುವ ಪ್ರಯತ್ನದಲ್ಲಿತ್ತು.

'ಈ ಕುದುಪ ಈಗ ನನ್ನ ಮಗ. ಇವನ ದೇಹದಲ್ಲಿರುವ ಎಲ್ಲಾ ಕೆಟ್ಟದಿಟ್ಟ ಈ ತಾಯಿಗೇ ಬರಲಿ....' ಎಂದನ್ನುತ್ತಾ ಬೆಳೆದಿಂಡಿನಷ್ಟು ಮುದ್ದಾದ ಮಗುವನ್ನು ಮುದ್ದಾಡುತ್ತಾ ಮತ್ತೆ ಮತ್ತೆ ಹೇಳಿ ಕೊಂಡಳು-ಕೊರತಿ.

ಮುದ್ದಾಡಿದ್ದು ಮುಗಿಯಿತು. ಈಗ ಮಗುವನ್ನು ಮರಳಿ ಪಡೆಯುವ ಕ್ರಿಯೆ ಆರಂಭ. ಗುತ್ತಿನೊಡತಿಯ ಆದೇಶದಂತೆ ಕೆಲಸದಾಕೆ ಚೆನ್ನಮ್ಮ ಒಡತಿ ಕೊಟ್ಟಿರುವ ಹಣದ ಗಂಟನ್ನು ಕೊರತಿಯ ಮಡಿಲಲ್ಲಿಟ್ಟಾಗ, ಆಕೆ ಮಗುವನ್ನು ಮತ್ತೊಮ್ಮೆ ಮುದ್ದಿಸಿ ಚೆನ್ನಮ್ಮನ ಕೈಯಲ್ಲಿಟ್ಟಳು. ಕೊರತಿಯಿಂದ ಮಗುವನ್ನು ಮರಳಿ ಪಡೆದಂತಾಯಿತು. ಅಲ್ಲಿಗೆ 'ಮಗು ದಾನ ಮಾಡು'ವ ಶಾಸ್ತ್ರ ಮುಗಿದಂತೆ.

ಇನ್ನು ಉಳಿದದ್ದು ಒಂದೇ ಕೆಲಸ. ಕೊರತಿಯ ಬುಟ್ಟಿಗೆ ಶಾಸ್ತ್ರದ ಪಡಿಯಾಗಿ ಭತ್ತ ಸುರಿಯುವುದು. ಗುತ್ತಿನ ಯಜಮಾನ್ತಿ ಭತ್ತದ ಬುಟ್ಟಿ ಎತ್ತಿ ಇನ್ನೇನು ಆಕೆಯ ಬುಟ್ಟಿಗೆ ಸುರಿಯಬೇಕೆನ್ನುವಷ್ಟರಲ್ಲಿ ಅಂಗಳದಲ್ಲಿ ಕೊರಗರ ನಾಯಕ ಕೇತು ಪ್ರತ್ಯಕ್ಷನಾಗಿದ್ದ. ಕೆಂಡ ಕಾರುತ್ತಿದ್ದ ಆತನ ಕಣ್ಗಳನ್ನು ಎದುರಿಸಲಾಗದೆ ಗುತ್ತಿನ ಒಡೆಯರು ಅಲ್ಲೇ ಕುಸಿಯುವಂತಾದರು. ಮತ್ತೊಂದು ಕ್ಷಣವೂ ಅಲ್ಲಿರದೆ ಕೆಳಜಗಲಿಯನ್ನೇರಿ ಬಂದು ಚಾವಡಿಯಲ್ಲಿ ತೂಗುಮಂಚದಲ್ಲಿ ಆಸೀನರಾದರು.

ಗುತ್ತಿನ ಒಡತಿ ಸೀತಕ್ಕೆಯವರ ಸ್ಥಿತಿ ಕೂಡಾ ಒಡೆಯರ ಸ್ಥಿತಿಗಿಂತ ಭಿನ್ನವಾಗಿರಲಿಲ್ಲ. ನೂರಾರು ಮುಡಿ ಗದ್ದೆ ತೋಟಗಳುಳ್ಳ, ಸಿರಿವಂತ ಗುತ್ತಿನ ಧಣಿಗಳು ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯನಾದ, ಅದರಲ್ಲೂ ಹೀನ ಕುಲದ ಕೊರಗ ಮಗನಿಗೆ ಹೆದರುವುದೆಂದರೆ! ಆಳುಗಳಿಗೆ ಇದು ಎಳ್ಳಷ್ಟೂ ಹಿತವೆನಿಸಲಿಲ್ಲ. ಅವುಗಳಿಗೇನು ಗೊತ್ತು-ಕೊರಗರನ್ನು ಎದುರು ಹಾಕಿಕೊಂಡರೆ ಗುತ್ತಿನೊಡೆಯರೇನು.... ಸೀಮೆಯ ಅರಸನೂ ಕಂಬಿ ಎಣಿಸಬೇಕಾಗುತ್ತದೆ ಎಂಬುದು.

ಗುತ್ತಿನ ಯಜಮಾನರು ಚಾವಡಿಯಲ್ಲಿ ಕುಳಿತು ಭಯದಲ್ಲಿ ಪುಕುಗುಟ್ಟುತ್ತಿದ್ದರೆ, ಕೊರತಿ ಮಾತ್ರ ಸ್ವಲ್ಪವೂ ಎದೆಗುಂದದೆ ತನ್ನ ಬುಟ್ಟಿಗೆ ಭತ್ತ ತುಂಬುವುದರಲ್ಲಿ ನಿರತಳಾಗಿದ್ದಳು. ಮಗನ ಇರಿವ ಉರಿನೋಟದ ಹಿಂದಿರುವ ಮನಸ್ಸನ್ನು ಕೊರತಿ ಅರ್ಥೈಸಿಕೊಂಡಳಾದರೂ ಆಕೆಯ ಮನೋವ್ಯಾಪಾರದಲ್ಲಿ ಕಿಂಚಿತ್ತೂ ಬದಲಾವಣೆಯಾಗಲಿಲ್ಲ. ಭತ್ತ ತುಂಬಿಸಿಕೊಂಡವಳೇ ಬಡಿಸಿರುವ ಅನ್ನವನ್ನು ಪಾತ್ರೆಯೊಂದರಲ್ಲಿ ತುಂಬಿಕೊಂಡು ಕೊರತಿ ಕೂತಲ್ಲಿಂದ ಎದ್ದು ಬಂದವಳೇ-

'ನೋಡಿದ್ರಾ ದೆತ್ತಿ...., ಇವ್ನ ಬಸಿರಲ್ಲೇ ಅಲ್ವ.... ನೀವು ಗುತ್ತಲ್ಲಿ ಬೇಯಿಸುತ್ತಿದ್ದ ಲೇಯ್ಯ-ಕಸಾಯವನ್ನೆಲ್ಲ ನನ್ನ ಕೊರಗನಲ್ಲಿ ಕೊಟ್ಟು ಕಳುಹಿಸುತ್ತಿದ್ದುದು. ಹೊಟ್ಟೆಗಿಲ್ಲದ ಆ ಕೇಡುಕಾಲದಲ್ಲಿ ನೀವು ಕೊಟ್ಟ ಭತ್ತ-ಧಾನ್ಯಗಳಿಗೆಲ್ಲ ಲೆಕ್ಕವುಂಟಾ ದೆತ್ತಿ ? ತಿನ್ನುವ ಬಾಯಿ ನಮ್ಮದು-ಕೊಡುವ ಕೈ ನಿಮ್ಮದು. ಆವತ್ತಿನ ನಿಮ್ಮ ಅನ್ನದ ಋಣ, ಇವತ್ತು ನನ್ನ ಮಗನನ್ನು ಹೀಗಿಟ್ಟಿದೆ ನೋಡಿ.....'

ತಾಯಿಯ ಮಾತುಗಳಿಗೆ ಮಗ ಕೇತು ಅರೆಕ್ಷಣ ತಲ್ಲಣಗೊಂಡಂತಾದ. ಈ ತಾಯಿ ತನ್ನತ್ತ ಹಂಗಿನ ಬಲೆಯನ್ನೆಸೆದು ತನ್ನನ್ನು ದುರ್ಬಲಗೊಳಿಸುತ್ತಿದ್ದಾಳೆ-ಎಂಬ ಭಾವಕ್ಕೊಳಕ್ಕಾಗಿ ಮತ್ತಷ್ಟು ಉದ್ವಿಗ್ನಗೊಂಡ. ಅಸ್ಪೃಶ್ಯತೆಯ ಶಾಪದಿಂದ ನರಳುತ್ತಿರುವ ತನ್ನವರನ್ನು ಮೇಲೆತ್ತಬೇಕೆಂಬ ಮಗನ ಯತ್ನಕ್ಕೆ ಈ ತಾಯಿ ಎಳ್ಳುನೀರು ಬಿಡುತ್ತಿದ್ದಾಳೆ-ಎಂದು ಕೇತು ಸಿಟ್ಟಿನಿಂದ ಚಡಪಡಿಸಿದ. ಆ ಪರಿಯ ಸಿಟ್ಟಿನಲ್ಲೂ ಆತನ ವಿವೇಚನೆ ಮಾತ್ರ ಕೈ ಕೊಡಲಿಲ್ಲ. ಒಂದು ಕ್ಷಣ ತನ್ನ ಅರಿವಿನ ಪರದೆಗೆ ತಾನು ಕಳೆದ ಬಾಲ್ಯದ ಚಿತ್ರಣವನ್ನು ಹಕ್ಕಿ ತಂದ. ಗುತ್ತಿನೊಡತಿಯ ಮುಖ ತಟ್ಟನೆ ಮೂಡಿಬಂತು. ತಾಯಿ ನುಡಿದ ಕೃತಜ್ಞತೆಯ ಮಾತುಗಳಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲವೆಂದು ಆತನಿಗೆ ಮನದಟ್ಟಾದಾರೂ ತಾನೀಗ ಯಾವ ಕಾರಣಕ್ಕೂ ಇಲ್ಲಿ ಕರಗಬಾರದೆಂದು ಆತ ನಿರ್ಧರಿಸಿದ್ದ.

ಗುತ್ತಿನೊಡತಿಯ ತನ್ನ ಪ್ರೀತಿ-ವಾತ್ಸಲ್ಯ, ಅಂತಃಕರಣ, ಮನುಷ್ಯತ್ವದ ಚಿಲುಮೆಯೊಂದನ್ನು ತನ್ನ ತಾಯತ್ತ ಹರಿಸಿದ್ದೇ, ಇದೀಗ ಈ ತಾಯಿ ಮಗನ ಉಗ್ರ ತಾಕೀತನ್ನೂ ಮರೆತು ಇಲ್ಲಿ ಬರುವುದಕ್ಕೆ ಕಾರಣ-ಎಂದು ಮಗ ಕೇತುವಿಗೆ ಸ್ಪಷ್ಟವಾಗಿತು.

ಆದರೂ ನಿಷ್ಠುರ ಮುಖಭಾವ ಹೊತ್ತು ತಾಯಿಯನ್ನು ಉಗ್ರವಾಗಿ ದಿಟ್ಟಿಸುತ್ತಿದ್ದಂತೆ, ಮಗುವನ್ನು ಎದೆಗೊತ್ತಿ ಹಿಡಿದಿದ್ದ ಗುತ್ತಿನೊಡತಿ ಹಾಗೇ.... ಕೇತುವತ್ತ ಬಂದವರು-'ನೋಡಪ್ಪ ಕೇತು.... ನಿನ್ನಮ್ಮನನ್ನು ಇಲ್ಲಿಗೆ ಕರೆಸಿಕೊಂಡವಳು ನಾನಲ್ಲ.... ಇಂವ. ನೀನು ಏನಿದ್ದರೂ ಉಗ್ರದಿಟ್ಟಿ ಬೀರಬೇಕು ಈತನತ್ತ' ಎಂದು ಮಗುವನ್ನೆತ್ತಿ ಕೇತುವತ್ತ ಚಾಚಿದ್ದರು.

ಕೇತುವು ಒಂದು ಕ್ಷಣ ನಿಜಕ್ಕೂ ವಿಚಲಿತನಾಗಿಯೇ ಸೀತಕ್ಕೆಯವರಿಂದ ಮಗು ಪಡೆದುಕೊಂಡ. ಚಂದಿರನ ಬಿಂಬದಂತಿದ್ದ ಆ ಮಗು ಕೇತುವತ್ತ ಒಂದು ಸಣ್ಣ ನಗೆ ಬೀರಿತು. ಅಸಹನೆಯಿಂದ ಕುದಿಯುತ್ತಿದ್ದ ಕೇತು ಆ ನಗುವಲ್ಲೇ ಕರಗಿ ಹೋದನೇನೋ! ತಟ್ಟನೆ ಮಗುವನ್ನೆತ್ತಿಕೊಂಡ. ಆದರೆ ಕ್ಷಣದಲ್ಲೆ ಆತನ ಚಿತ್ತ ಮೂವತ್ತು ವರುಷಗಳಷ್ಟು ಹಿಂದಕ್ಕೋಡಿತ್ತು. ಆಗೇನಾದರೂ ಹೀಗೆ ಕೊರಗರು ಗುತ್ತಿನ ಮಕ್ಕಳನ್ನು ಹೊತ್ತಲ್ಲದ ಹೊತ್ತಲ್ಲಿ ಮುಟ್ಟಿದರೆ, ಕೈಗೆ ಕಬ್ಬಿಣದ ಬರೆ ಬೀಳುತ್ತಿತ್ತೋ ಏನೊ...?

ಬದಲಾದ ಕಾಲದ ಬಗ್ಗೆ ಯೋಚಿಸುತ್ತಿದ್ದ ಕೇತು, ಅಲ್ಲೇ ನಿಂತಿದ್ದ ಗುತ್ತಿನ ಒಡತಿಯ ಮುಖವನ್ನು ದಿಟ್ಟಿಸುತ್ತ ಒಂದು ಮಾತನ್ನು ಅಂದೇ ಬಿಟ್ಟ 'ಅಮ್ಮ.... ಈ ಬಾರಿ ನಿಮ್ಮ ಸಂಕಲ್ಪದಂತೆಯೇ ಕೆಲಸ ನಡೆದು ಹೋಗಿರಬಹುದು. ಆದರೆ ಮುಂದೆ ಎಂದೂ ಹೀಗಾಗುದಿಲ್ಲ.... ಈಗ ಕಾಲ ಬದಲಾಗಿದೆ. ನಿಮ್ಮ ಮನಸ್ಸು-ಯೋಚನೆಯೂ ಬದಲಾಗಬೇಕಾಗಿದೆ. ನಮ್ಮ ಕೊರತಿಯಿಂದ ಮಗು ಗುಣವಾಗುವುದಿಲ್ಲ. ಆಯಸ್ಸಿದ್ದರೆ ಮಗುವನ್ನು ಗುಣಪಡಿಸಬೇಕಾದವರು ವೈದ್ಯರು... ಹೀನ ಜಾತಿಯ ಕೊರಗರಲ್ಲ.....'ಎಂದು ಹೇಳುತ್ತಲೇ ಮಗುವನ್ನು ಮರಳಿ ಒಡತಿಗೊಪ್ಪಿಸುತ್ತಿರುವುದನ್ನು ಗುತ್ತಿನೊಡೆಯರು ಚಾವಡಿಯ ಕಿಂಡಿಯಿಂದ ಉಸಿರು ಬಿಗಿ ಹಿಡಿದು ದಿಟ್ಟಿಸುತ್ತಿದ್ದರು. ❑❑

ಕರ್ನಾಟಕ : ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹೊಸ ಆಯಾಮ.

ರಾಜ್ಯದ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗಗಳ ಸರ್ವತೋಮುಖ ಏಳಿಗೆಗಾಗಿ ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ವಿನೂತನ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಅಭಿವೃದ್ಧಿಯ ಮುಖ್ಯ ವಾಹಿನಿಯಲ್ಲಿ ಎಲ್ಲರೂ ಒಂದಾಗಿ ರಾಜ್ಯ ಮತ್ತು ರಾಷ್ಟ್ರವನ್ನು ಪ್ರಗತಿಯ ಉತ್ತುಂಗಕ್ಕೆ ಕೊಂಡೊಯ್ಯಲು ಶ್ರಮಿಸುತ್ತಿದೆ.

2005-2006ನೇ ಸಾಲಿನಲ್ಲಿ ಅಭಿವೃದ್ಧಿ ಯೋಜನೆಗಳು

ಅಲ್ಪ ಸಂಖ್ಯಾತರ ಇಲಾಖೆ.

- ರೂ. 1320.04 ಲಕ್ಷಗಳ ವೆಚ್ಚದಲ್ಲಿ ಅಲ್ಪಸಂಖ್ಯಾತರ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮ.
- ರೂ. 325.00 ಲಕ್ಷಗಳ ವೆಚ್ಚದೊಂದಿಗೆ ಸಮುದಾಯ ಭವನ, ಶಾದಿಮಹಲ್‌ಗಳ ನಿರ್ಮಾಣ.
- 2138 ವಿವಿಧ ಅಭ್ಯರ್ಥಿಗಳಿಗೆ ತರಬೇತಿ ಹಾಗೂ ಶಿಷ್ಯ ವೇತನಕ್ಕಾಗಿ ಒಟ್ಟು ರೂ. 71.00 ಲಕ್ಷಗಳ ಅನುದಾನ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ.

- ಸ್ವಾವಲಂಬನ ಸಾಲದ ಯೋಜನೆಯಡಿ 6325 ಫಲಾನುಭವಿಗಳಿಗೆ ರೂ. 300.00 ಲಕ್ಷಗಳ ಸಾಲ ಹಾಗೂ ರೂ. 200.00 ಲಕ್ಷಗಳ ಸಹಾಯಧನ.
- ರೂ. 800.00 ಲಕ್ಷಗಳ ವೆಚ್ಚದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ 750 ಬಡ ಹಾಗೂ ಸಣ್ಣ ರೈತರ 2925 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ.
- 300 ಅಲ್ಪ ಸಂಖ್ಯಾತರ ಕುಶಲ ಕರ್ಮಿಗಳಿಗೆ ಶ್ರಮ ಶಕ್ತಿ ಯೋಜನೆಯಡಿ ರೂ. 100.00 ಲಕ್ಷಗಳ ವೆಚ್ಚದಲ್ಲಿ ಆರ್ಥಿಕ ನೆರವು.
- ರಾಷ್ಟ್ರೀಯ ಅಲ್ಪ ಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಸಹಯೋಗದೊಂದಿಗೆ ನೇರ ಸಾಲದ ಯೋಜನೆಯಡಿ 2300 ಜನ ಫಲಾನುಭವಿಗಳಿಗೆ ರೂ. 900.00 ಲಕ್ಷಗಳ ಸಾಲ ಸೌಲಭ್ಯ.

ದೇವರಾಜ ಅರಸು ಸಂಶೋಧನಾ ಸಂಸ್ಥೆ.

- ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ವರದಿಗಳ ತುಲನಾತ್ಮಕ ಅಧ್ಯಯನ.

ಕರ್ನಾಟಕ ವಾರ್ತೆ.
Karnataka Information

ಕಣ್ಮರೆಯಾದ ಕೋಗಿಲೆ

- ಆರ್. ಕಲ್ಯಾಣಮ್ಮ

ಇತ್ತೀಚೆಗೆ ಪದೇ ಪದೇ ನಮ್ಮ ನಾಡಿನ ಜೀವಜ್ಯೋತಿಗಳನ್ನು ಆಧಾರಸ್ಥಂಭಗಳಂತಿದ್ದ ಮಹಾ ಮಹಾ ವ್ಯಕ್ತಿಗಳನ್ನು ಕಳೆದುಕೊಳ್ಳುವ ದುರ್ಭಾಗ್ಯವು ನಮಗೊದಗುತ್ತಲೇ ಇದೆ. ಭಾರತದ ಸ್ವಾತಂತ್ರಕ್ಕೆ ಮೂಲ ಪುರುಷರಾದ, ಕಾರಣ ಕರ್ತರಾದ, ಭಾರತೀಯರ ನರನಾಡಿಗಳಲ್ಲಿ ದೇಶಪ್ರೇಮ, ಐಕ್ಯತೆ, ದಕ್ಷತೆಗಳನ್ನು ತುಂಬಿ ಹರಿಸಿದ ಮಹಾತ್ಮರನ್ನು ಕಳೆದುಕೊಂಡ ಕಣ್ಣೀರು ಆರುವುದರೊಳಗಾಗಿ ಅವರ ಬಲಗೈಯಂತಿದ್ದು ಸಮಗ್ರ ಭಾರತಕ್ಕೆ ಏಕೆ ವಿಶ್ವಕ್ಕೆಲ್ಲಾ ವಿಶ್ವದ ಮಹಿಳೆಯರಿಗೆಲ್ಲಾ ಆದರ್ಶಸ್ವರೂಪರಾಗಿ, ಕವಿ ಕೋಗಿಲೆಯೆಂದು ಸುಪ್ರಸಿದ್ಧರಾಗಿದ್ದು 'ತೊಟ್ಟಿಲನ್ನು ತೂಗುವಾಕೈಗಳೇ ಜಗತ್ತನ್ನೂ ಆಳಬಲ್ಲದು' ಎಂಬ ಮಹಾ ವಾಕ್ಯವನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಿದ ಆದರ್ಶ ಸ್ತ್ರೀಯೆನಿಸಿದ ಕವಯಿತ್ರಿ ಸರೋಜಿನಿ ದೇವಿಯವರಿಗೆ ಕಳೆದ ತಿಂಗಳು ತಾನೆ ಎಪ್ಪತ್ತು ವರ್ಷಗಳು ಪೂರೈಸಿತೆಂದು ದೇಶಕ್ಕೆ ದೇಶವೇ ಹೆಮ್ಮೆಯಲ್ಲಿ ಮುಳುಗಿತ್ತು. ನಮ ಭಾರತದ ವೀರಸುತೆಯಾದೀಕೆಯು ಇಂದಿಲ್ಲ, ನಮ್ಮನ್ನಗಲಿ ಹೋಗಿರುವರು ಅವರ ಜೀವನದ ಇತಿಹಾಸವು ಅತಿ ಭೆಲೆಯುಳ್ಳದ್ದು. ಭಾರತ ರಮಣಿಯರೆಲ್ಲರೂ ಅರಿತು ಅನುಕರಿಸಲು ಯೋಗ್ಯವಾದದು. ತಾಜ್‌ಮಹಲನ್ನು ಕಣ್ಣು ಮುಂದೆ ತೋರುವ ಆಗ್ರಾನಗರವೂ ಶ್ರೀರಾಮಚಂದ್ರನನ್ನು ನೆನಪಿಗೆ ತರುತ್ತಿರುವ ಅಯೋಧ್ಯಾನಗರವೂ ಸೇರಿರುವ ಪ್ರದೇಶವೇ ಸಂಯುಕ್ತ ಪ್ರಾಂತವೆನ್ನುವುದು. ಮನ್ನೆ ಮನ್ನೆಯರೆಗೂ ಎಪ್ಪತ್ತು ವಯಸ್ಸಿನವರಾದಾಗ್ಯೂ ಯುವತಿಯ ದಕ್ಷತೆಯಿಂದ ಈ ಪ್ರಾಂತ್ಯದ ಗವರ್ನರ್ ಪದವಿಯನ್ನು ವಹಿಸಿದ್ದ ಶ್ರೀಮತಿ ಸರೋಜಿನಿ ದೇವಿಯವರನ್ನರಿಯದವರು ಅತಿವಿರಳ. ವಿಶ್ವದ ವಿಖ್ಯಾತ ಮಹಿಳೆಯರಲ್ಲಿ ಶ್ರೀಮತಿ ಸರೋನಿಯವರೊಬ್ಬರು. ಅತಿ ಉನ್ನತ ಸ್ಥಿತಿಯಲ್ಲಿರುವ, ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಕೂಡ ಇಂತಹ ಉನ್ನತಾಧಿಕಾರವನ್ನು ವಹಿಸಿದವರು ಬೇರಾರೂ ಇಲ್ಲವೆನ್ನಬಹುದು.

ಹುಟ್ಟುವಾಗಲೇ ಕವಿಗಳಿಗಿರತಕ್ಕ ಸಕಲ ಗುಣಗಳೊಡನೆ ಜನಿಸಿದವರು ಶ್ರೀಮತಿ ಸರೋಜಿನಿ ದೇವಿಯವರು. ಹನ್ನೊಂದನೆಯ ವರ್ಷ ವಯಸ್ಸಿನಲ್ಲಿಯೇ ಯಾವುದೋ ಒಂದು ಆಲ್‌ಜಿಬ್ರಾ ಲೆಖ್ಖವನ್ನು ಮಾಡುತ್ತಿದ್ದರು. ಮನಸ್ಸು ಅದರಲ್ಲಿ ಹೋಗಲಿಲ್ಲ, ಇದ್ದಕ್ಕಿದ್ದ ಹಾಗೆಯೇ ಒಂದು ಕವಿತೆಯನ್ನು ರಚಿಸಿದರು. ಹನ್ನೆರಡನೆಯ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ (ಈಗಿನ ಎಸ್.ಎಸ್.ಎಲ್.ಸಿ.) ಪರಿಕ್ಷೆಯಲ್ಲಿ ತೇರ್ಗಡೆಯಾಗಿ ಉಚ್ಚ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳಿದರು. ಅವರ ತಂದೆಯಾದ ಆಶೋಕನಾಥ ಚಟ್ಟೋಪಾಧ್ಯಾಯರು ವಿದ್ಯಾವಂತರು, ವಿದ್ಯಾಪ್ರೇಮಿ. ಹೈದರಾಬಾದ್ ಸಂಸ್ಥಾನದಲ್ಲಿ ಶಿಕ್ಷಣಾಧಿಕಾರಿಗಳಾಗಿದ್ದರು. ಹನ್ನೆರಡನೆಯ ವಯಸ್ಸಿನಲ್ಲೇ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮದರಾಸು ವಿಶ್ವವಿದ್ಯಾಲಕ್ಕೇ ಕೀರ್ತಿ ತಂದರು ಶ್ರೀಮತಿ ಸರೋಜಿನಿ ದೇವಿಯವರು.

ಲಂಡನ್ ವಿದ್ಯಾಲಯಗಳಲ್ಲಿ ಕೆಲವು ವರ್ಷ ವ್ಯಾಂಸಗ ಮಾಡಿದರು. ಶ್ರೀಮತಿಯವರು ನಂತರ ಕೇಂಬ್ರಿಡ್ಜ್ ನಗರದ ವಿದ್ಯಾಲಯಕ್ಕೆ ಸೇರಿದ್ದು ದೇಹಾರೋಗ್ಯವು ಕೆಟ್ಟದ್ದರನಿಮಿತ್ತ ಶಿಕ್ಷಣವನ್ನು ಮುಂದರಿಸಲಾಗಲಿಲ್ಲ, ತಾಯ್ನಾಡಿಗೆ ಹಿಂತಿರುಗಿದರು. ಹೈದರಾಬಾದ್ ಸಂಸ್ಥಾನದಲ್ಲಿ ಸರ್ಕಾರಿ ವೈದ್ಯರಾಗಿದ್ದ ಡಾಕ್ಟರ್ ಗೋವಿಂದರಾಜುಲು ನಾಯಿಡು ಅವರನ್ನು ವಿವಾಯವಾದರು. ನಂತರ ದೇಶ ಸೇವಾ ಕ್ಷೇತ್ರಕ್ಕೆ ಇಳಿದರು. ಸಾವಿರದ ಒಂಭೈನೂರ ಹದಿಮೂರನೆಯ ಇಸವಿಯಲ್ಲಿ ನಡೆದ ಕಾಂಗ್ರೆಸ್ ಮಹಾ ಸಭೆಯಲ್ಲಿ ಭಾಗವಹಿಸಿ ಉಜ್ವಲ ಭಾಷಣ ಮಾಡಿ ಸರ್ವರನ್ನೂ ಮಗ್ಧಗೊಳಿಸಿದರು.

ಮಹಾತ್ಮಗಾಂಧಿಯವರು ರಾಷ್ಟ್ರೀಯ ಸಮರದಲ್ಲಿ ಮುಖ್ಯ ಪಾತ್ರ ವಹಿಸತೊಡಗಿದೊಡನೆಯೇ ಶ್ರೀಮತಿಯವರು ಕಾಂಗ್ರೆಸ್ ಧುರೀಣರಲ್ಲೊಬ್ಬರಾದರು. ಮಹಾತ್ಮ ಗಾಂಧಿಯವರ ವಿಶ್ವಾಸಕ್ಕೂ ನಂಬಿಕೆಗೂ ಪಾತ್ರರಾದರು. ಸಾವಿರದ ಒಂಭೈನೂರ ಇಪ್ಪತ್ತಾರನೇ ಇಸವಿಯಲ್ಲಿ ರಾಷ್ಟ್ರ ಮಹಾಸಭೆಯ ಅಧ್ಯಕ್ಷ ಸ್ಥಾನವು ಇವರಿಗೆ ಲಭಿಸಿತು. ಇದಕ್ಕೆ ಮೊದಲೂ ನಂತರವೂ ಈ ಪವಿತ್ರ ಸ್ಥಾನವು ಯಾವ ಸ್ತ್ರೀಗೂ ದೊರೆಯಲೇ ಇಲ್ಲ.

ಪೂಜ್ಯ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹ ಸಮರವು ಯಾವ್ಯಾವ ಕಾಲದಲ್ಲಿ ಹೇಗೆ ಹೇಗೆ ನಡೆಯುತ್ತಿತ್ತೋ ಆ ಸಮಯದಲ್ಲೆಲ್ಲಾ ತನ್ನ ದಳದವರೊಡನೆ ಮುಂದೆ ನಿಂತು ಹೋರಾಡಿ ಕೀರ್ತಿಗಳಿಸಿದರು. ಉಪ್ಪು ಸತ್ಯಾಗ್ರಹ ಕಾಲದಲ್ಲಿ ದರ್ಶನಾ ಕ್ಷೇತ್ರವನ್ನು ಮುತ್ತಿ ಅಬಲೆಯರ ಸಬಲತ್ವವನ್ನು ಹೊರಗೆಡವಿದರು. ಸಾವಿರದ ಒಂಭೈನೂರ ನಲವತ್ತೆರಡನೆಯ ವರ್ಷ ಸತ್ಯಾಗ್ರಹ ಸಮರದಲ್ಲಿ ಇತರರೊಡನೆ ಇವರಿಗೂ ಕಾರಾಗೃಹ ಶಿಕ್ಷೆ ದೊರೆಯಿತು.

ಸ್ವಾತಂತ್ರ ಭಾರತದಲ್ಲಿ ಅತಿ ವಿಸ್ತಾರವಾದ ಪ್ರಾಂತ್ಯವಾದ ಸಂಯುಕ್ತ ಪ್ರಾಂತ್ಯದ ಗವರ್ನರ್ ಆಗಿದ್ದ ಶ್ರೀಮತಿ ಸರೋಜಿನಿಯವರು ಎಲ್ಲ ಬಗೆಯಲ್ಲಿಯೂ ಆ ಸ್ಥಾನಕ್ಕೆ ಅರ್ಹರಾದವರು. ಅವರು ಚಿಕ್ಕವರಾಗಿದ್ದಾಗ ಕೊರವಂಜಿಯೊಬ್ಬಳು ಅವರ ಹಸ್ತವನ್ನು ಪರೀಕ್ಷಿಸಿ ನೋಡಿ, ''ಈ ಹುಡುಗಿಯು ಒಂದು ದಿನ ಸ್ವರ್ಣಪೀಠದಲ್ಲಿ ಕೂರುವ ಯೋಗವುಳ್ಳವಳು'' ಅಂದಳಂತೆ. ಮನ್ನೆಯವರೆಗೂ ಲಕ್ನೋನಗರದ ರಾಜಭವನದಲ್ಲಿ ನಿಜವಾಗಿಯೂ ಚಿನ್ನದ ಕೆಲಸ

ಮಾಡಿದ ಆಸನದಲ್ಲಿ ಕುಳಿತೇ ಕವಿಚಕ್ರವರ್ತಿನಿಯಾದ ಸರೋಜಿನಿ ದೇವಿಯವರು ಭುವಿ ಚಕ್ರವರ್ತಿನಿಯಾಗಿ ಗವರ್ನರ್ ಪದವಿಯನ್ನಲಂಕರಿಸಿದ್ದರು.

ಸರೋಜಿನಿ ದೇವಿಯವರ ಕವಿತಾ ಪ್ರೌಢಿಮೆಯನ್ನು ಪಾಶ್ಚಾತ್ಯರೂ ಕೂಡ ಬಹಳವಾಗಿ ಮೆಚ್ಚಿಕೊಂಡಾಡಿರುವರು. ಅವರು ರಚಿಸಿದ ಕವಿತೆಗಳಲ್ಲಿ ಇದುವರೆಗೂ ನಾಲ್ಕು ಕವಿತಾ ಸಂಗ್ರಹ ಗ್ರಂಥಗಳು ಪ್ರಕಾಶಕ್ಕೆ ಬಂದಿವೆ. ಬಾಲ್ಯದಲ್ಲಿ ಮೊಟ್ಟ ಮೊದಲು ಪಾಶ್ಚಾತ್ಯ ರೀತಿಯಲ್ಲಿ ಕವಿತ್ವವನ್ನು ರಚಿಸಿದ್ದರಂತೆ. ''ಎಡ್ಮಂಡ್ ಗಾಸ್'' ಎಂಬುವರ ಇದಿರಿನಲ್ಲಿ ತನ್ನ ಕವಿತೆಯನ್ನು ಹಾಡಿ ತೋರಿಸಿದರಂತೆ. ಅವನ್ನು ಕೇಳಿ ಆನಂದ ಹೊಂದಿದ ಆ ಪಾಶ್ಚಾತ್ಯ ಪಂಡಿತರು ''ನುಡಿ ಸ್ಪಷ್ಟವಾಗಿದೆ. ಪಾಶ್ಚಾತ್ಯ ಭಾವನೆಯೂ ವರ್ಣನೆಯೂ ತುಂಬಿದೆ. ನಿಮ್ಮ ಸ್ವಂತ ಭಾವನೆಯನ್ನು ನಿಮ್ಮ ದೇಶ ಭಾಷೆಯಲ್ಲೇ ಹೇಳಿ, ಕಾಜಾಣ ಹಕ್ಕಿಯೂ ರಾಬಿನ್‌ಪಕ್ಷಿಯೂ, ಚರ್ಚಿನ ಘಂಟೆಯೂ ಬೇಡ, ನಿಮ್ಮ ದೇಶದ ದೇವಾಲಯಗಳಲ್ಲಿ ಪೂಜಾ ಸಮಯದಲ್ಲಿ ಶಬ್ದ ಮಾಡುವ ಘಂಟೆಗಳನ್ನು ಕುರಿತು ನಿಮ್ಮ ದೇಶ ಭಾಷೆಯಲ್ಲೇ ಹಾಡಿ'' ಅಂದರಂತೆ. ಅಂದಿನಿಂದ ಭಾರತದ ಸಂಸ್ಕೃತಿ, ಕಲೆ ಸಾಹಿತ್ಯ - ವಿಜ್ಞಾನ, ಜೀವನದ ವಿಷಯವಾಗಿ ಕವಿ ಕೋಗಿಲೆಯು ಹಾಡತೊಡಗಿದರು. ಬಡಬಗ್ಗರ ಮನೋಭಾವವನ್ನು ಪ್ರೇಮದ ಸವಿಯನ್ನೂ ಆತ್ಮಿಕ ತತ್ವದ ಸೌಂದರ್ಯವನ್ನೂ ಕುರಿತು ಹಾಡಿದರು. ''ಜೀವನದಲ್ಲಿರುವ ಕಷ್ಟವನ್ನು ಗಾನದಲ್ಲಿರುವ ಮಾಧುರ್ಯದಿಂದ ಮರೆಯೋಣ''ವೆಂದು ಹಾಡಿರುವರು. ದುಃಖ ರಸದಿಂದ ಕೂಡಿದ ಸಂಭವಗಳನ್ನು ಕವಿತ್ವವಾಗಿ ರಚಿಸಿ, ಶೋಕರಸವಾಗಿ ಅನುಭವಿಸುವ ಉನ್ನತ ಅನುಭವವನ್ನು ಆ ಸಣ್ಣ ವಾಕ್ಯವು ತಿಳಿಸುತ್ತದೆ.

ಕವಿಗೆ ತಕ್ಕಂತಹ ಮಹತ್ವ, ಇಂಪೂ, ಸೂಕ್ಷ್ಮವಾದ ದೃಷ್ಟಿಯೂ, ಚಾರುರ್ಯವೂ ಹುಟ್ಟಿದಾಗಲಿಂದ ಅವರಲ್ಲಿ ಕಂಡುಬರುತ್ತಿದ್ದವು. ಭಾವನೆಯ ಮೇಲ್ಪಟ್ಟದಲ್ಲಿ ಇವು ಇದ್ದವೆಂದು ಹೇಳಬಹುದಾಗಿದೆ. ಆದರೆ ಅಗತ್ಯವೊದಗಿದಾಗ ಸ್ತ್ರೀತ್ವದಿಂದ ಪುರುಷತ್ವವೂ, ಉಚ್ಚ ಸ್ಥಾನದಿಂದ ನಿಕೃಷ್ಠಾನವೂ, ಇಂಪಿನಿಂದ ಘರ್ಜನೆಯೂ, ನಿಶ್ಶಬ್ಧದಿಂದ ಗಲಾಟೆಯೂ ಉಂಟಾಗುತ್ತಿದ್ದುದುಂಟು.

ಸಾವಿರದ ಒಂಬೈನೂರ ಇಪ್ಪತ್ತನೆಯ ಇಸವಿಯಲ್ಲಿ ಲಂಡನ್ ಮಹಾನಗರದಲ್ಲಿ ಆಲ್ಬರ್ಟ್ ಹಾಲಿನಲ್ಲಿ ಮಹಾಸಭೆಯೊಂದು ನೆರೆದಿತ್ತು. ಪಂಜಾಬಿನ ಭೀಕರ ಹತ್ಯೆಯನ್ನು ಕುರಿತು ಶ್ರೀಮತಿಯವರು ಖಂಡಿಸಿ ಭಾಷಣ ಮಾಡಿದರು. ಹಿಂದೂದೇಶದಿಂದ ಬಂದಿರುವ ಮಹಿಳೆಯೊಬ್ಬಳು ಮಾತನಾಡುವುದೆಂದರೆ ಆ ಆಶ್ಚರ್ಯವನ್ನು ಕಾಣಲು ಆ ಕಾಲದಲ್ಲಿ ನೆರೆದ ಜನ ಸಮೂಹವನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಶ್ರೀಮತಿಯವರು ಭಾಷಣ ಮಾಡಿದರು. ಮಾತು ಸ್ಪಷ್ಟವಾಗಿ ಹೊರಡಲಿಲ್ಲ. ದಾಸ್ಯ ಶೃಂಖಲೆಯಿಂದ ಬಂಧಿತಳಾಗಿ ಪಂಜಾಬ್ ನರಹತ್ಯೆಯಿಂದ ದುಃಖಿತಳಾದ ಸಾಕ್ಷಾತ್ ಭಾರತ ಮಾತೆಯೇ ಮಾತನಾಡುವಂತಿತ್ತು. ಅಮೃತಸರ್ ನಗರದಲ್ಲಿ ನಡೆದ ಕ್ರೂರ ಕೃತ್ಯಗಳನ್ನು ದುಃಖದಿಂದ ಕವಿಯರಸಿ ವರ್ಣಿಸುವಾಗ ನೆರೆದಿದ್ದ ಜನ ಸಮೂಹವು ತುಟಿ ಪಿಟಕ್ಕೆನ್ನದೇ ಕೇಳುತ್ತಿತ್ತು. ಕೆಲವರು ದುಷ್ಟರು ಗಲಾಟೆಯೆಬ್ಬಿಸಿದರು. ಆ ಸಮಯದಲ್ಲಿ ಶ್ರೀಮತಿಯವರು ಪುರುಷ ಧೈರ್ಯದಿಂದ, ಕಣ್ಣುಗಳಲ್ಲಿ ಕಿಡಿಯನ್ನು ಕಾರುತ್ತ 'ಷಟ್ ಅಪ್' (ಬಾಯಿ ಮುಚ್ಚಿರಿ) ಎಂದು ಘರ್ಜಿಸಲು ದುಷ್ಟರು ತಣ್ಣಗಾದರು. ಶ್ರೀಮತಿಯವರು ಕೋಕಿಲ ಕಂಠದಿಂದ ಹಾಡುವುದನ್ನೂ ಬಲ್ಲರು. ಗುಡುಗಿನಂತೆ ಘರ್ಜಿಸುವುದನ್ನೂ ಬಲ್ಲರು ಎಂಬುದನ್ನು ಜನರು ಅರಿತರು.

ಅವರು ಕೇಂಬ್ರಿಡ್ಜ್ ನಗರದಲ್ಲಿ ಪ್ರಶಸ್ತಿಯನ್ನು ಪಡೆಯುವವರೆಗೂ ಶಿಕ್ಷಣ ಪಡೆಯಲಾಗಲಿಲ್ಲ. ಆದರೂ ಅನೇಕ ವಿಶ್ವ ವಿದ್ಯಾಲಯಗಳ ಪದವಿಗಳೂ ಪ್ರಶಸ್ತಿಗಳೂ ಅವರನ್ನು ಹುಡುಕಿಕೊಂಡು ಅವರಿದ್ದಲ್ಲಿಗೇ ಬಂದವು. ಒಂದುಸಲ ಒಂದು ಪ್ರಶಸ್ತಿಯನ್ನು ಸ್ವೀಕರಿಸಲು ಅವರು ನಿರಾಕರಿಸಿದರು. ಸಾವಿರದ ಒಂಬೈನೂರ ಇಪ್ಪತ್ತೊಂದನೆಯ ಇಸವಿಯಲ್ಲಿ ಕಲ್ಕತ್ತಾ ವಿಶ್ವ ವಿದ್ಯಾಲಯದವರು ಇವರಿಗೆ ಸಾಹಿತ್ಯದಲ್ಲಿ ಡಾಕ್ಟರ್ (Dr. of Litereature) ಪದವಿಯನ್ನು ಕೊಡಬೇಕೆಂದು ನಿರ್ಧಾರ ಮಾಡಿದರು. ವೇಲ್ಸ್ ಯುವರಾಜರ ನೇತೃತ್ವದಲ್ಲಿ ವಿಶೇಷ ಸಭೆ ಕೂಡಿದಾಗ ಆ ಪ್ರಶಸ್ತಿಯನ್ನು ಅವರಿಗೆ ಅರ್ಪಿಸುವುದಾಗಿ ಹೇಳಿದಾಗ ಶ್ರೀಮತಿಯವರು ಅದನ್ನು ನಿರಾಕರಿಸಿದರು.

ಧೀರತ್ವದಿಂದಲೂ ವಿನೋದವಾಗಿಯೂ ಮಾತನಾಡುವುದರಲ್ಲಿ ಸರೋಜಿನಿ .ದೇವಿಯಂತಹವರು ತೀರ ವಿರಳ. ಮಹಾತ್ಮಾಗಾಂಧಿಯವರ ವಿಷಯವಾಗಿ ಕೂಡ ನಿರ್ಭಯವಾಗಿ ವಿನೋದವಾಗಿ ಮಾತನಾಡುವರು. ಅವರನ್ನು 'ಮಿಕ್ಕಿ ಮೌಸ್' (ತಂತ್ರವುಳ್ಳ ಇಲಿ) ಎಂದು ಒಂದು ಸಲ ಸರೋಜಿನಿ ದೇವಿಯವರು ವ್ಯಂಗ್ಯವಾಗಿ ಹೇಳಿರುವರು.

ಸಾರ್ವಜನಿಕ ಸೇವಾಕಾರ್ಯದಲ್ಲುದ್ಯುಕ್ತಳಾಗಿದ್ದ ಮಹಿಳೆಯೊಬ್ಬಳು ಅಲಂಕಾರ ಪ್ರಿಯೆಯಾಗಿದ್ದಳು. ಅವಳು ಸ್ವಭಾವತಃ ಸುಂದರಿ. ಶ್ರೀಮತಿಯವರು ಆಕೆಯನ್ನು ನೋಡಿ ''ಅವಳಂತಹ ಮುಖ ಲಾವಣ್ಯವು ನನಗಿದ್ದಿದ್ದರೆ ಯಾವ ಕೆಲಸವುತಾನೆ, ನಾನು ಮಾಡಲಾರೆ'' ಅಂದರು.

ಸಮೀಪದಲ್ಲಿ ಲಕ್ನೋ ವಿಶ್ವವಿದ್ಯಾಲಯದ ರಜತೋತ್ಸವ ಸಮಾರಂಭದ ಅಧ್ಯಕ್ಷತೆಯನ್ನೀಕೆಯು ವಹಿಸಿದ್ದರು. ಸ್ವತಂತ್ರ ಭಾರತದ ಪ್ರಥಮ ಮಂತ್ರಿಯಾದ ಜವಹರಲಾಲ್ ಅವರೂ ಸಂಯುಕ್ತ ಪ್ರಾಂತದ ಪ್ರಮುಖರಾದ ಗೋವಿಂದ ವಲ್ಲಭ ಪಂತರೂ ಹಾಜರಿದ್ದರು. ಪಶ್ಚಿಮ ಬಂಗಾಳದ ಗೌರ್ನರಾದ ಡಾಕ್ಟರ್ ಕೈಲಾಸನಾಥ ಕಟ್ಜು ಅವರೂ ಬಂದಿದ್ದರು. ಆಗ ಸರೋಜಿನಿ

ದೇವಿಯವರು ಕಟ್ಟು ಅವರನ್ನು ನೋಡಿ "ನೀವೂ ಗವರ್ನರ್, ನಾನೂ ಗವರ್ನರ್, ಈ ಕಾಲದಲ್ಲಿ ಗವರ್ನರುಗಳೆಲ್ಲರೂ ಇಸ್ಪೀಟು ಕಟ್ಟುಗಳಲ್ಲುಳ್ಳ ಜೋಕರುಗಳಂಥವರೇ" ಅಂದರು. ಗವರ್ನರ್ ಪದವಿಯಲ್ಲಿರುವ ತೋರಿಸಿದ ಕಡೆ ರುಜು ಮಾಡುವ ಕೆಲಸವಷ್ಟೇ ಇರುವುದೆಂಬುದನ್ನೂ ಅವರು ಸೂಚಿಸಿದರು. ಸರೋಜಿನಿ ದೇವಿಯವರ ಅತ್ಯುತ್ಸಾಹವನ್ನು ಕಂಡ ಮಿತ್ರರೊಬ್ಬರು "ಹಿಂದಿನ ಕಾಲದಲ್ಲಿ ಗವರ್ನರುಗಳಿಗೆ ಏಕೆ ಅಷ್ಟು ಅಧಿಕಾರ ಕೊಟ್ಟಿದ್ದರೆಂದು ನಾವೆಲ್ಲಾ ನೊಂದುಕೊಂಡಿದ್ದೆವು. ಇವರನ್ನು ನೋಡಿದರೆ ಇವರಿಗೇಕೆ ಹೆಚ್ಚು ಅಧಿಕಾರ ಕೊಡಲಿಲ್ಲವೆಂದು ನೊಂದುಕೊಳ್ಳಬೇಕಾಗಿದೆ." ಅಂದರಂತೆ.

ಅಯೋಧ್ಯೆಯನ್ನಾಳುವ ಹಕ್ಕುಳ್ಳವನೆಂದು ಹೇಳಿಕೊಂಡು ಅನಾಮಧೇಯ ನವಾಬನೊಬ್ಬನು ಸರೋಜಿನಿ ದೇವಿಯವರ ಬಳಿ ಬಂದು "ನನ್ನ ಸಿಂಹಾಸನವನ್ನು ಮತ್ತೆ ನನಗೆ ಕೊಡಿಸಿ" ಎಂದು ಕೇಳಲು, ಶ್ರೀಮತಿ ಸ್ವಲ್ಪವೂ ಅಳುಕದೆ ಶಾಂತ ಚಿತ್ತದಿಂದ "ಸಿಂಹಾಸನವು ಸಿಕ್ಕಿದಾಗ ನಿನಗೆ ಬಲು ಸಂತೋಷದಿಂದ ಕೊಡಿಸುತ್ತೇನೆ" ಎಂದು ಹೇಳಿ ಕಳುಹಿಸಿದರಂತೆ.

ಸರೋಜಿನಿ ದೇವಿಯವರ ಅಧಿಕಾರ ಗೃಹದಲ್ಲಿ ಕಲಾ ಸೌಂದರ್ಯವನ್ನು ಕಾಣಬಹುದು. ಒಳ್ಳೇ ಉತ್ತಮವಾದ ಚಿತ್ರಪಟಗಳು, ಅಂದವಾದ ಕೈಗಾರಿಕೆ ಸಾಮಾನುಗಳು ಶಿಸ್ತಿನಿಂದಿಡಲ್ಪಟ್ಟಿರುವುದನ್ನು ಕಾಣಬಹುದು. ಅತಿಥಿಗಳನ್ನು ಸತ್ಕರಿಸುವುದರಲ್ಲಿ ಶ್ರೀಮತಿಯವರು ಅತಿ ನಿಪುಣರು. ಸಾಹಿತಿಯೂ ಕಲಾವಿದರು ಅವರ ಗೃಹವನ್ನು ಪ್ರವೇಶಿಸಲು ತಡೆಯೇ ಇಲ್ಲ, ಯಾವಾಗ ಬೇಕಾದರೆ ಆವಾಗ ಹೋಗಬಹುದು. ಅಧಿಕಾರದ ಪರಿಮಳದೊಡನೆ ಸಕಲ ಪರಿಮಳವನ್ನೂ ಕಾವಲಿನಿಂದ ತುಂಬಿ ಗಡಿಬಿಡಿಯಾಗಿರುವ ಸ್ಥಳದಲ್ಲಿ ಕೇಳಿಕೆಯನ್ನೂ ರಸಿಕತ್ವವನ್ನೂ ತುಂಬಿದವರು ಶ್ರೀಮತಿಯವರು.

ಎಪ್ಪತ್ತು ವರ್ಷ ವಯಸ್ಸಿನಲ್ಲೂ ಇಪ್ಪತ್ತು ವರ್ಷದ ಯುವತಿಯಂತೆ ಕುಂದದ ಬಲ, ಕಗ್ಗದ ಮನಸ್ಸಿನಿಂದ ಬಾಳ್ವೆ ನಡೆಸಿದ ಕವಿ ಸರೋಜಿನಿಯವರು ಭರತಖಂಡದ ಪ್ರಾಚೀನ ಮಹತ್ವವನ್ನೂ ನೂತನ ಸಂಸ್ಕೃತಿಯನ್ನೂ ಹೆಣೆದು ತೋರಿಸಿದ ಭಾರತ ರಮಣೀ ರತ್ನವಾಗಿ ಪ್ರಕಾಶಿಸಿ ಕಣ್ಮರೆಯಾದರು. ☐☐

(ಆರ್. ಕಲ್ಯಾಣಮ್ಮನವರ ಸರಸ್ವತಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ)

"ಕಠಿಣ ಶಿಕ್ಷೆ ಮತ್ತು ಮಾನಸಿಕ ಚಿಕಿತ್ಸೆ ಬೇಕಿದೆ"

- ಎಲ್. ವಿ. ಶಾಂತಕುಮಾರಿ

ಸುದ್ದಿ ಮಾಧ್ಯಮಗಳಲ್ಲಿ ಪ್ರತಿನಿತ್ಯ ತಪ್ಪದೆ ಕೇಳಿಬರುವ ಪದಗಳು, ಅತ್ಯಾಚಾರ, ರೇಪ್. ಅಪ್ರಾಪ್ತವಯಸ್ಸಿನ ಹೆಣ್ಣುಮಕ್ಕಳಾಗಬಹುದು, ವೃದ್ಧೆಯರಾಗಬಹುದು, ಮಧ್ಯ ವಯಸ್ಕರಾದ ಗೃಹಿಣಿಯರು, ವಿಧವೆಯರು, ಸನ್ಯಾಸಿನಿಯರು ಯಾರಾದರೂ ಆಗಬಹುದು. ಒಬ್ಬನೇ ವ್ಯಕ್ತಿಯಿಂದಲೋ, ಒಂದು ಗುಂಪಿನಿಂದಲೋ ಅತ್ಯಾಚಾರಕ್ಕೊಳಗಾಗುತ್ತಲೇ ಇರುತ್ತಾರೆ. ವೈವಾಹಿಕ ಸಂಬಂಧದಲ್ಲಿಯೂ ಪತ್ನಿಗೆ ಬೇಡವಾಗಿದ್ದಾಗ, ಬಲವಂತವಾಗಿ ಪತಿ ಸಂಭೋಗಿಸಿದರೆ ಅದೂ ಅತ್ಯಾಚಾರವೇ. ಆದರೂ ಅದು ಬೆಳಕಿಗೆ ಬರುವುದಿಲ್ಲ ಅದನ್ನು ಕಾನೂನು ಪ್ರಕಾರ ತಡೆಯುವುದೂ ಸಾಧ್ಯವಿಲ್ಲ. ಆದರೆ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಗುವ, ಬಿತ್ತರವಾಗದಿರುವ ಅತ್ಯಾಚಾರಗಳಿಗೆ ಹಲವಾರು ಮುಖಗಳಿರುತ್ತವೆ. ದ್ವೇಷ, ಪ್ರತೀಕಾರಗಳು ಇವುಗಳಲ್ಲಿ ಮುಖ್ಯವಾದವು. ಗೆದ್ದವನು, ಸೋತವನ ಮನಸ್ಸನ್ನು ಘಾಸಿಗೊಳಿಸಿ, ಅವನನ್ನು ಕೀಳು ಮಾಡಿ ತೋರಿಸಲು ಅನುಸರಿಸುವ ಮೊದಲ ಕ್ರಮ, ಸೋತವನ ಹೆಂಡತಿಯ ಮೇಲೆ ಅತ್ಯಾಚಾರವೆಸಗುವುದು. ಮಹಾಭಾರತದ 'ಸಭಾಪರ್ವ'ದಲ್ಲಿ ದ್ರೌಪದಿಯ ಸೀರೆ ಸೆಳೆದಾಗ ದುರ್ಯೋಧನನ ಉದ್ದೇಶವೂ ಇದೇ ಆಗಿತ್ತು. ಇದರಿಂದ, ಗೆದ್ದ ಗಂಡಿನ ಅಹಂಕಾರದ ಪ್ರದರ್ಶನ, ಆವನ ಅಹಂಗೆ ಒಂದು ರೀತಿಯ ತೃಪ್ತಿ, ಪ್ರತೀಕಾರ, ಸೇಡುಗಳಿಗೆ ಪಾಶವೀ ಸಮಾಧಾನ. ಯುದ್ಧಗಳಲ್ಲಿ ಗೆದ್ದ ಯೋಧರು ಅನಾದಿಕಾಲದಿಂದಲೂ ಮಾಡುತ್ತ ಬಂದಿರುವುದು, ಸೋತ ದೇಶದ ಹೆಣ್ಣುಗಳ ಮೇಲೆ ಅತ್ಯಾಚಾರ. ಗಂಡಿನ ಮನಸ್ಸಿನಲ್ಲಿನ ಸೇಡಿನ ಕಿಚ್ಚು, ಹೆಣ್ಣಿನ ಮೇಲೆ ಲೈಂಗಿಕ ಆಕ್ರಮಣಕ್ಕೆಳಸುತ್ತದೆ ಎನ್ನುವುದು ಒಂದು ವಿಚಿತ್ರ ಕಾಂಪ್ಲೆಕ್ಸ್, ಇಂತಹ ಸಂದರ್ಭಗಳಲ್ಲಿ, ಗಂಡಿಗೆ ಸಿಗುವಂತಹ ದೈಹಿಕ ತೃಪ್ತಿ ತೀರಾ ಕ್ಷಣಿಕವಾದದ್ದು. ಆದರೂ ಅವನ ಅಹಂಗೆ ಅಸಾಧ್ಯ ತೃಪ್ತಿ ಸಿಗುತ್ತದೆ. ಹೀಗೇಕೆ? ಇಂತಹ

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month *October - 2005*

ಅತ್ಯಾಚಾರಗಳನ್ನು ಪ್ರಚೋದಿಸುವ ಮತ್ತೊಂದು ಮುಖ, ಪಾಶವೀ ಕಾಮ- ಇದಕ್ಕೆ, ಕಾಲ, ದೇಶ, ಪಾತ್ರ ಅಪಾತ್ರಗಳ ಪರಿವೆಯೂ ಇಲ್ಲ, ಕ್ಷಣದಲ್ಲಿಯೇ ಲಾಲಸೆ ತೀರಿಸಿಕೊಳ್ಳುವುದನ್ನು ಬಿಟ್ಟು ಬೇರೆ ಯಾವ ನೀತಿ, ಸೂತ್ರದ ಚಿಂತೆಯೂ ಇಲ್ಲ. ಈ ಅತ್ಯಾಚಾರಗಳ ಮತ್ತೊಂದು ಮುಖ ವಿಕೃತ ಕಾಮ- ಅದರಲ್ಲಿಯೂ ಸಣ್ಣಮಕ್ಕಳನ್ನು ಭೋಗಿಸಬೇಕೆನ್ನುವ ವಿಕೃತಿ. ದಿನೇ ದಿನೇ ಇಂತಹ ವಿಕೃತಿಗಳ ಸಂಖ್ಯೆ ಹೆಚ್ಚುತ್ತಿರುವಾಗ, ನಮ್ಮ ಸಾಮಾಜಿಕ ಸ್ವಾಸ್ಥ್ಯ, ಸ್ವಸ್ಥ ಮನಸ್ಸುಗಳ ಬಗ್ಗೆ ಚಿಂತೆ ಹೆಚ್ಚುತ್ತದೆ.

ಹೆಣ್ಣು ಕೇವಲ ಉಪಭೋಗದ ವಸ್ತುವೆಂಬ ಪರಿಕಲ್ಪನೆ ಮೊದಲು ಬದಲಾಗಬೇಕು. ಇದನ್ನು ಕೇವಲ ಶಿಕ್ಷೆಯಿಂದ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಅಲ್ಲದೇ ಅತ್ಯಾಚಾರ ಮಾಡಿದವರೆಲ್ಲರೂ ಶಿಕ್ಷೆಗೂ ಒಳಪಡುತ್ತಿಲ್ಲ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ. ಹಾಗೊಮ್ಮೆ ಶಿಕ್ಷೆಗಲ್ಲ- ಅಕಸ್ಮಾತ್ ಕಾನೂನಿನ ಕೈಗೆ ಸಿಕ್ಕವರಿಗಾದರೂ, ತತ್‌ಕ್ಷಣ ಕಠಿನ ಶಿಕ್ಷೆ, ಮಾನಸಿಕ ಚಿಕಿತ್ಸೆ ಎರಡಕ್ಕೂ ಏರ್ಪಾಟು ಮಾಡಬೇಕಾಗಿದೆ. ಕೇವಲ ಶಿಕ್ಷೆಯಿಂದ ಅವರಿಗೆ ತಮ್ಮ ಹೀನಾತಿ ಹೀನ- ಅಪರಾಧದ ಅರಿವೇ ಆಗುವುದಿಲ್ಲ. ಇಂತಹ ಆಪರಾಧಿಗಳ ಮಾನಸಿಕ ರಚನೆಯಲ್ಲಿ ಮೂಲಭೂತ ಸುಧಾರಣೆಯಾಗುವ ತನಕ, ಅತ್ಯಾಚಾರಗಳು ತಪ್ಪುವುದಿಲ್ಲ. ಹೆಣ್ಣನ್ನು ಹೆಣ್ಣಿನ ದೇಹವನ್ನು ಗೌರವಿಸುವುದನ್ನು ಕಲಿಸುವಂತಹ ಶಿಕ್ಷೆ ಚಿಕಿತ್ಸೆಗಳು ಒಟ್ಟಿಗೇ ನಡೆದಾಗ, ಈ ವಿಕೃತಿಗಳಿಗೊಂದು ಕೊನೆಬರಬಹುದು ಆದರೆ ಅಲ್ಲಿಯ ತನಕ? □□

"Achala" 108, Skyline Surabhi,
14 -P , Vidyapeeta Road,
BSK III Stage,
Bangalore - 560 085

To :

Smt/Sri